# HAVYAKA SANDESHA

## ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

||धर्मो रक्षति रक्षितः||

Vol. XXVII No. 05 | August 2017 | Pages 16 | **Rs. 2/-**


**ಶ್ರೀಕೃಷ್ಣ ಜನ್ಮಾಷ್ಟಮಿಯ ಹಾಗೂ ಗಣೇಶ ಚತುರ್ಥಿಯ ಶುಭಾಶಯಗಳು**



# FORTHCOMING EVENTS

## ANNUAL GENERAL BODY MEETING

**on 10th Sept. 2017 10.00 a m. onwards**

## DURGA POOJA

**on 24th Sept. 2017 3.00 p.m. onwards at Havyakara Sabhabhavana,** Deepti Solitaire


*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T.*

"**Havyaka Sandesha**" is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆ 2665 2591

***Hon. Editor*** : Smt. Amita S. Bhagwat

***Editorial Committee*** : Smt. Shashikala Hegde, Smt. Tanuja Hegde, Shri Gautam Upadhya, Smt. Uma Swamy

***Publisher*** : Narayan Akadas R. Hon. Gen. Secretary

***Printed at*** : M/s. Navin Printers Mumbai - 400 016. ✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, Benefactor (BN) Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page Rs. 5000/- annum Rs. 500/- one time.
½ Page Rs. 10,000/- annum Rs. 1,000/- one time
Full Page Rs.15,000/- annum Rs. 2,000/- one time
Matrimonial Rs. 500/- per Issue

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2016-2017**

***President*** : Shivkumar P. Bhagwat
***Vice - President*** : Sanjay Bhat
***Hon. Gen. Secretary*** : Narayan Akadas
***Hon. Jt. Secretary*** : Umesh Hegde
***Hon. Treasurer*** : A. G. Bhat

***Elected Members :***

Smt. Tanuja Hegde, A. K. Bhat, Smt. Shashikala Hegde, R. N. Kameshwar, Gautam Upadhya, Smt. Uma Swamy, Keshav Hegde, Chidanand Bhagwat, R. M. Shastri

***Editorial***

# Sparkle With Sunshine

*The sweet earthy smell, the tiny droplets hanging on to the leaves, coolness in the air along with the chattering sound of the rain entices us. Although "Love" is referred to as Sunshine, we invariably fall in love with Monsoon. However when the blue of the sky hides for long, when traffic jams on the road become a daily head ache, when trains running late irks us , we all want to see the Sunshine again.*

*Nature is vivacious, beautiful, soothing and she speaks the language of love. Nature is called Mother Nature because She nurtures. At the same time we see the wilderness of Nature in the form of natural calamities like flood, storm and earthquake. Mother Nature has many faces, different forms and we, as human beings find it difficult to understand her. She is enigmatic. While understanding her true self we may ask the question 'Are Beauty and Fury, two sides of the same coin'?*

*With all our urbanization one can't deny the fact that man is a child of Nature; a part of environment.Ultimately we are also governed by law of nature. Physically, we change with time. Similarly we act differently under different circumstances. When we feel angry, hurt, sad, frustrated it does not mean we are abnormal. It only means we are human. After all we are not robots that are made to order.*

*However, many feel that expressing their feelings is a weakness and crying, a sign of cowardice. Suppressing our emotions for long may lead to depression or we may erupt at some point of time. Either of them is not good. At times we even don't know to express our love and affection for others. It's not enough if we care but we should also show that we care. Communication gap not only creates differences but also a distance. It's only with communication that we can build cordial relations, solve our differences and create an environment of peace and harmony. The sky should not always be loomed with dark clouds. It should shower to clear itself, to cool us and sparkle with sun-shine again.*

*Communication is not an outburst of anger. It's an art of expressing honestly so that you clear your mind and at the same time don't hurt the feelings of the others. Communication should fulfill both our SanathanaTatva of Swadharma and Paradharma. It's a skill that one can develop with practice.*

*After all 'Mother Nature' has gifted man the power of judgement, discretion and control over his natural instinct.*

Amita S Bhagwat

e-mail : amitabhagwat@gmail.com

*PAGE DONATED BY : **ADVOCATE M. S. PANDIT** PUNE*

# From The President's Desk



Dear Members,

After summer vacation Havyaka Welfare Trust, Mumbai is again a buzz with activities. The onset of monsoon has not dampened our spirits. Shri Karki Venkataraman Shastri Suri Award ceremony was held with all the spirit and it was a happy moment for the Trust to confer the Award to Shri L. S. Shastri who is a renowned journalist. He has dedicated his life to the principles of journalism and known for his hard work and dedication. Legislature, judiciary and executive are known as three pillars of democracy. Journalism, it is said, is the fourth pillar of the democracy. The strength of the democracy depends upon the quality and transparency of journalism. The country can progress only if journalism is based on ethics. Shri KarkiVenkataraman Shastri Suri raised his voice against the rule of British and those superstitions that were hampering the progress of the society. He stood for principles, was always on the right path and was never afraid of the consequences. His spirits are always remembered.

We were happy to listen to the experience of Shri L. S. Shastri and Shri. S. M. Krishnarao. Cultural activities followed thereafter were also interesting. It was a beautiful evening with fun filled program of Shri Balesar Vinayak Hegde and his team.

We are happy that youth wing of our Trust is becoming active. We are glad to see their regular contribution of write up to Havyaka Sandesha. This year we are holding elocution competition for the Youth Wing during Annual General Meeting. Bhavageethe competition is also held on that day. We aim at giving opportunities to our members to exhibit their skill and talents. It's also our pride to distribute prizes to meritorious students on the occasion of Durga Pooja.

The month of Shravana, with all the greenery around, is also the beginning of the festive season which connects us to our roots. Let us seek the Blessings of Almighty on the auspicious occasion of Gokulashtami and Ganesh Chaturthi.

With Regards,

**S. P. BHAGWAT**

# ELECTION NOTICE - 2017

I have been nominated as Hon. Returning Officer and authorised to conduct the election of eight members to the Managing Committee for a term of two years i.e. for 2017-18 & 2018-19, for the vacancies caused by retirement of eight members viz. Shri Narayan Akadas, Shri Umesh Hegde, Shri A.G. Bhat, Shri R. M. Shastri, Shri Chidanand Bhagwat, Shri Gautam Upadhya, Smt. Shashikala Hegde, Smt. Uma Swamy. However, they are eligible for re-election. The details are as follows :-

1. Receiving the duly completed nomination forms upto 4.00 pm on 2nd September, 2017 at Havyaka Welfare Trust, Kalina Office.
2. Receiving written request of withdrawal latest by 4.00 pm on 5th Sept, 2017 at HWT Office, Kalina.
3. Scrutiny of nomination forms, preparing the final list of candidates and displaying the same on the Notice Board of Havyaka Office, Kalina on 7th Sept, 2017.
4. Election to be held, if required, during the Annual General Body Meeting on 10th Sept, 2017. Decision of the Hon. Returning Officer shall be final.
5. Declaration of Result of Election.
6. For the smooth conduct of the Election, the Returning Officer may take assistance / help of the volunteers.
7. Members are earnestly requested to co-operate in all the respects.
8. Nomination Forms are available at Kalina and Dombivli offices during office hours up to 4 pm.

Place : Mumbai
Date : 1st August, 2017

Sd/-
**S. V. Shastri**
*Hon. Returning Officer*

*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE***

# ಸಂಸ್ಕೃತ ಸಾಹಿತ್ಯದ ಹಿರಿಮೆ

✍ **ಶೈಲಜಾ ಹೆಗಡೆ, ಮುಂಬಯಿ**

### ಪಂಚತಂತ್ರ

ಸಂಸ್ಕೃತ ಸಾಹಿತ್ಯದಲ್ಲಿ ಕಥಾ ಸಾಹಿತ್ಯಕ್ಕೆ ವಿಶೇಷ ಮಹತ್ವವಿದೆ. ಕಥಾ ಸಾಹಿತ್ಯದಲ್ಲಿ ನೀತಿಕಥೆ ಮತ್ತು ಲೋಕಕಥೆಗಳೆಂದು ಎರಡು ವಿಧಗಳಿವೆ. ಪಶುಪಕ್ಷಿಗಳೇ ಪ್ರಧಾನ ಪಾತ್ರವಾಗುಳ್ಳ ನೀತಿಕಥೆಗಳು ರಾಜನೀತಿ ಮತ್ತು ಧಾರ್ಮಿಕ ಸಂಗತಿಗಳನ್ನು ಒಳಗೊಂಡಿವೆ. ಉಪದೇಶವೇ ನೀತಿಕಥೆಗಳ ಪ್ರಧಾನ ಉದ್ದೇಶವಾಗಿದ್ದು ಇವುಗಳನ್ನು ಪಶುಕಥೆಗಳೆಂದೂ ಕರೆಯುತ್ತಾರೆ. ಅಂತೆಯೇ ಲೋಕಕಥೆಯು ಶಿಕ್ಷಾತ್ಮಕ ಮತ್ತು ಮನೋರಂಜನಾತ್ಮಕವೆಂಬ ಪ್ರಭೇದಗಳನ್ನು ಹೊಂದಿದೆ.

ನೀತಿಕಥೆಗಳಲ್ಲಿ ಪಂಚತಂತ್ರ ಮತ್ತು ಹಿತೋಪದೇಶಗಳು ಪ್ರಸಿದ್ಧವಾದವುಗಳು. ಭಾರತೀಯ ಕಥಾ ಸಾಹಿತ್ಯದಲ್ಲಿ ಇವು ಅತ್ಯಂತ ಜನಪ್ರಿಯತೆಯನ್ನು ಗಳಿಸಿವೆ. ಇವುಗಳಲ್ಲಿ ಪಂಚತಂತ್ರದ ರಚನಾಕಾರ, ವಿಷ್ಣುಶರ್ಮನೆಂಬ ವಿದ್ವಾಂಸನು. ಮಿಹಿಲಾರೋಪ್ಯದ ರಾಜನಾದ ಅಮರಶಕ್ತಿಯು ತನ್ನ ಮೂವರು ಮಕ್ಕಳಿಗೆ ಕೇವಲ ಆರು ತಿಂಗಳುಗಳ ಅವಧಿಯಲ್ಲಿ ರಾಜನೀತಿಯನ್ನು ಬೋಧಿಸುವ ಸಲುವಾಗಿ ಈತನನ್ನು ನೇಮಿಸಿದನೆಂದು ವದಂತಿಯಿದೆ. ಪಂಚತಂತ್ರದ ಭೂಮಿಕೆಯಲ್ಲಿ ನಿರೂಪಿತವಾದ, 'ಏತತ್ ಪಂಚತಂತ್ರಕಮ್ ನಾಮ ನೀತಿಶಾಸ್ತ್ರಮ್ ಬಾಲಾವಬೋಧನಾರ್ಥಮ್ ಭೂತಲೇ ಪ್ರವೃತ್ತಮ್' ಎಂಬ ಉಕ್ತಿಯು ಈ ಸಂಗತಿಯನ್ನು ಸ್ಪಷ್ಟಪಡಿಸುತ್ತದೆ. ಹೆಸರೇ ಸೂಚಿಸುವಂತೆ ಪಂಚತಂತ್ರವು ಐದು ತಂತ್ರಗಳನ್ನು ಹೊಂದಿದೆ. ಮುಖ್ಯಕಥೆಯು ಗದ್ಯದಲ್ಲಿದ್ದರೂ ಮಧ್ಯೆ ಮಧ್ಯೆ ವರ್ಣನಾತ್ಮಕವಾದ ಉಪದೇಶಾತ್ಮಕವಾದ ಪದ್ಯಗಳನ್ನು ಕಥಾನಿರೂಪಣೆಗೆ ರಂಜನೆಯುನ್ನು ನೀಡಿವೆ. ಪಂಚತಂತ್ರದ ಪ್ರಥಮ ತಂತ್ರ ಸುಹೃದ್ಭೇದವೆಂಬುದು. ಇದರಲ್ಲಿ 461 ಶ್ಲೋಕಗಳಿವೆ. ಪಿಂಗಲಕವೆಂಬ ಸಿಂಹ, ಸಂಜೀವಕವೆಂಬ ವೃಷಭ, ಕರಟಕ- ದಮನಕವೆಂಬ ಕಾಡುನಾಯಿಗಳ ಕಥೆಯನ್ನು ಇದು ಒಳಗೊಂಡಿದೆ. ಎರಡನೆಯ ತಂತ್ರ ಮಿತ್ರ ಸಂಪ್ರಾಪ್ತಿ. ಈ ಭಾಗದಲ್ಲಿ ಸುಮಾರು 199 ಪದ್ಯಗಳಿವೆ. ಚಿತ್ರಗ್ರೀವವೆಂಬ ಪಾರಿವಾಳ, ಹಿರಣ್ಯಕವೆಂಬ ಇಲಿ, ಲಘುಪತನಕವೆಂಬ ಕಾಗೆ, ಚಿತ್ರಾಂಗವೆಂಬ ಜಿಂಕೆ, ಮಂಥರವೆಂಬ ಆಮೆ. ಇವುಗಳ ನಡುವಿನ ಸ್ನೇಹ ಮತ್ತು ಆಪತ್ಕಾಲದಲ್ಲಿಯ ಅವುಗಳ ಪರಸ್ಪರ ಸಹಕಾರ ಇವುಗಳನ್ನು ಹೃದಯಂಗಮವಾಗಿ ವಿವರಿಸಲಾಗಿದೆ. ಇಲ್ಲಿಯ 'ಯಾನಿ ಕಾನಿ ಚ ಮಿತ್ರಾಣಿ ಕರ್ತವ್ಯಾನಿ ಶತನ್ಯಾಪಿ' ಎಂಬ ವಾಕ್ಯವು ಸಾಧ್ಯವಾದಷ್ಟು ಹೆಚ್ಚು ಹೆಚ್ಚು ಮಿತ್ರರನ್ನು ಗಳಿಸಬೇಕೆಂಬ ನೀತಿಯನ್ನು ಸಾರುತ್ತದೆ ಮೂರನೆಯ ತಂತ್ರವೇ ಕಾಕೋಲೂಕೀಯಮ್. ಇಲ್ಲಿಯ ಪದ್ಯಗಳ ಸಂಖ್ಯೆ 254. ಕಾಗೆ ಹಾಗೂ ಗೂಬೆಗಳ ನಡುವಿನ ವೈರತ್ವ, ಶತ್ರುಪಡೆಯಲ್ಲಿ ಭೇದವನ್ನು ಸೃಷ್ಟಿಸಿ, ಆತ ದುರ್ಬಲನಾದಾಗ ಹೇಗೆ ಜಯವನ್ನು ಸಂಪಾದಿಸಬಹುದೆಂಬ ತಥ್ಯವನ್ನು ಇಲ್ಲಿ ಬೋಧಿಸಲಾಗಿದೆ. ಶಾಂತಿಯ ಮಹತ್ವವನ್ನೂ ಪ್ರತಿಪಾದಿಸಲಾಗಿದೆ. ಲಬ್ಧ ಪ್ರಣಾಶಮ್ ಎಂಬುದು ನಾಲ್ಕನೆಯ ತಂತ್ರ. ಸುಮಾರು 80 ಪದ್ಯಗಳನ್ನು ಹೊಂದಿದ ಈ ಭಾಗದಲ್ಲಿ ಬರುವ ಮಂಗ ಮತ್ತು ಮೊಸಳೆಯ ಕಥೆಯು ಲೋಕಪ್ರಸಿದ್ಧವಾದುದು. ಮೊಸಳೆಯ ಮೋಸಕ್ಕೆ ತುತ್ತಾದ ಮಂಗನ ಚಾತುರ್ಯವನ್ನು ಇಲ್ಲಿ ಬಣ್ಣಿಸಲಾಗಿದೆ. ಅಪರೀಕ್ಷಿತಕಾರಕಮ್ ಇದು ಐದನೆಯ ತಂತ್ರ. ಸಾರಾಸಾರ ವಿಚಾರವಿಲ್ಲದೇ ಎಸಗಿದ ಕಾರ್ಯ ಹಾನಿಕಾರಕವೆಂಬುದನ್ನು ಈ ತಂತ್ರವು ವಿವರಿಸುತ್ತದೆ. ಹೇಗೆ ಒಬ್ಬ ಬ್ರಾಹ್ಮಣ ತನ್ನ ಮಗುವನ್ನು ರಕ್ಷಿಸಿದ, ತಾನೇ ಪ್ರೀತಿಯಿಂದ ಸಾಕಿದ ಮುಂಗುಸಿಯನ್ನು ತನ್ನ ಅವಿವೇಕದಿಂದ ಕೊಂದು ಪಶ್ಚಾತ್ತಾಪ ಪಡುವ ಕಥೆಯನ್ನು ಇಲ್ಲಿ ವರ್ಣಿಸಲಾಗಿದೆ. ಇದರಲ್ಲಿ ಸುಮಾರು 96 ಪದ್ಯಗಳಿವೆ.

ಹೀಗೆ ಪಂಚತಂತ್ರದಲ್ಲಿ ಬರುವ ಕಥೆಗಳ ಭಾಷೆ ಸರಳವೂ, ಸ್ಪಷ್ಟವೂ ಆಗಿದ್ದು ಅವು ಒಂದರೊಡನೊಂದು ಬೆಸೆದುಕೊಂಡು ಚಿತ್ತಾಕರ್ಷಕವಾಗಿದೆ. ಸೂತ್ರರೂಪದಲ್ಲಿ ಕಥೆಯನ್ನು ಹೆಣೆದ ಪರಿ ಅನನ್ಯವಾದುದು. ಕಥಾ ನಿರೂಪಣೆಯಲ್ಲಿ ಶ್ಲೋಕಗಳನ್ನು ಮಾಧ್ಯಮವಾಗಿ ಬಳಸಿರುವುದರಿಂದ ಕಥೆಗಳು ತಮ್ಮ ಸಾಮಾನ್ಯ ಸ್ತರವನ್ನು ಮೀರಿ ಉನ್ನತ ಸ್ತರವನ್ನು ಏರಿವೆ. ಸಂಪೂರ್ಣ ಕಥೆಯ ತಿರುಳನ್ನು ಪ್ರಾರಂಭದ ಶ್ಲೋಕದಲ್ಲಿಯೇ ಪಡಿಮೂಡಿಸಿದ ಕವಿಯ ಚಾಕಚಕ್ಯತೆ ಮೆಚ್ಚುವಂತಹದು. ಹಾಗಾಗಿಯೇ ಈವರೆಗೆ ಪಂಚತಂತ್ರದ ಇನ್ನೂರಕ್ಕೂ ಮಿಕ್ಕಿದ ರೂಪಾಂತರಗಳು ಐವತ್ತಕ್ಕೂ ಅಧಿಕ ಭಾಷೆಗಳಲ್ಲಿ ಇದು ಅನುವಾದಿಸಲ್ಪಟ್ಟಿದೆ. ಅಲ್ಲದೆ ಅನೇಕ ಮಧ್ಯಕಾಲೀನ ಮತ್ತು ಆಧುನಿಕ ಭಾರತೀಯ ಭಾಷೆಗಳಲ್ಲಿ ಪಂಚತಂತ್ರವು ಅನುವಾದಿತವಾಗಿದೆ. ಆದರೆ ಇಷ್ಟೊಂದು ಲೋಕಪ್ರಿಯತೆಯನ್ನು ಗಳಿಸಿದ ಇದರ ಮೂಲಪಾಠವು ದೊರೆಯದೇ ಇರುವುದು ಸೋಜಿಗದ ಸಂಗತಿಯಾಗಿದೆ ಹಾಗೂ ಕಾಲದ ವಿಷಯದಲ್ಲಿಯೂ ಶೋಧಗಳು ನಡೆದಿವೆ. ಪಾಶ್ಚಾತ್ಯ ವಿದ್ವಾಂಸ ಹರ್ಟೇಲ್ ಎಂಬವನು ಪಂಚತಂತ್ರದ ಕಾಲದ ವಿಷಯದಲ್ಲಿ ಸಾಕಷ್ಟು ಸಂಶೋಧನೆಯನ್ನು ನಡೆಸಿ, ಪಂಚತಂತ್ರದ ರಚನಾಕಾರನು ಕಾಶ್ಮೀರದವನೆಂದು ಪ್ರತಿಪಾದಿಸಿದ್ದಾನೆ. ಆದರೆ ರಾಜಾ ಮಿಹಿರಾಲೋಪ್ಯನ ಪುತ್ರರಿಗೆ ಕಲಿಸಿದ ಗುರುವು ದಾಕ್ಷಿಣಾತ್ಯನೆಂದು ಊಹಿಸಲಾಗಿದೆ. ಪಂಚತಂತ್ರದ ಕರ್ತೃವು ಚಾಣಕ್ಯನ ಹೆಸರನ್ನು ಉಲ್ಲೇಖಿಸಿರುವುದರಿಂದ ಅವನು ಚಾಣಕ್ಯನ ನಂತರದ ಕಾಲದವನೆಂದೂ, ಪಂಚತಂತ್ರದಲ್ಲಿ ದೀನಾರ್ ಮುದ್ರೆಯ ಉಲ್ಲೇಖವಿರುವುದರಿಂದ ಅದು ಕಾಲ 533ಕ್ಕಿಂತ ಪೂರ್ವದಲ್ಲಿ ರಚಿತವಾಗಿರಬಹುದೆಂದು ಚರ್ಚಿಸಲಾಗಿದೆ. ಪಂಚತಂತ್ರದ ಕಾಲ ಎರಡನೆಯ ಶತಮಾನವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕಾಲದ ವಿಷಯವೇನೇ ಇರಲಿ, ಪಂಚತಂತ್ರವು ರಾಜಪುತ್ರರಿಗೆ ನೀತಿಯನ್ನು ಬೋಧಿಸುವಲ್ಲಿ ಸಫಲತೆಯನ್ನು ಪಡೆದುಕೊಂಡಿದೆ ಎಂಬುದಕ್ಕೆ ಕೆಳಗಿನ ಶ್ಲೋಕವು ಉತ್ತಮ ದೃಷ್ಟಾಂತವಾಗಿದೆ.

**'ಆಪತ್ಕಾಲೇ ತು ಸಂಪ್ರಾಪ್ತೇ ಯನ್ಮಿತ್ರಮ್ ಮಿತ್ರಮೇವ ತತ್।**
**ವೃದ್ಧಿಕಾಲೇ ತು ಸಂಪ್ರಾಪ್ತೇ ದುರ್ಜನೋಽಪಿ ಸುಹೃದ್ಭವೇತ್॥'**

ಆಪತ್ಕಾಲದಲ್ಲೂ ಯಾರು ಮಿತ್ರರಾಗಿರುತ್ತಾರೋ ಅವರೇ ನಿಜವಾದ ಮಿತ್ರರು. ಏಳ್ಗೆಯ ಕಾಲದಲ್ಲಾದರೋ ದುರ್ಜನರೂ ಮಿತ್ರರಾಗಿರುತ್ತಾರೆ.

*(ಮುಂದುವರಿಯುವುದು)*

*PAGE DONATED BY : **SHRI N. R. HEGDE**, DOMBIVLI*

# HAVYAKA YOUTH WING

✍ **Meghana D. Hegde**

**Tally Ho to Bhutan!!!**

It was the 1st of September, 2016. It was a normal boring day in the classroom. The students of TYBTech Production, VJTI, were fighting over the place to go on a vacation in December. There was a big fight. The group split into two. The plans made for the trips failed. All the students returned to their homes and hostels disappointed that day. In the evening when I opened my WhatsApp, I saw that a group named Bhutan had been created. There were only 15 members in the group. Thus started our journey to the happiest country in the world. This trip went on to become the most cherished experiences of my life. I would like to give an account of the days spent during the trip.

**Day 1 - Day 2 :** We caught the train from Mumbai LTT to NJP, West Bengal on 4th December, 2016 at 8.10 am. It was supposed to be a 35 hours train journey. But due to bad weather and fog conditions, the train got delayed by 10 hours. But time flew by while playing bluff, Uno and "Damsharads".

**Day 3 :** On 6th December, 2016, we reached NJP at 6 am. It was freezing cold. Our tour guide was waiting in the bus for us outside the station. We left NJP at 6.30 am. The bus journey to Thimphu, the capital city of Bhutan, was the most mesmerizing journey ever. The Teesta river was flowing in all its beauty and glory. The mountains and the lush green hills took our breath away. The cool air was soothing and at the same time tantalizing. We reached Thimphu at 8.30 pm. We were all exhausted and the warm, fluffy beds were inviting us to sleep.

**Day 4 :** Our tour guide took us to the National Museum where we saw the photos of the King and Queen of Bhutan. We were then taken to the palace complex of the Bhutan royalty. The palace purely depicted the greatness and simplicity of the King of Bhutan. We naturally understood the underlying secret of the happiness prevailing in the country.

**Day 5 :** On the 5th day, we were taken to the banks of the Teesta river for white water rafting. All of us were bubbling with excitement. The white waters seemed welcoming. The currents of the waters were both soothing and at the same time exhilirating. The temperature of the waters was nearly 2 degrees. We rowed in unison under the guidance of the rafting guide. After this enthralling experience, we had a lunch of Maggi with special Bhutanese spices in it. And I swear to God, it was the best Maggi I've ever had in my life.

**Day 6 :** On the 6th day, we set off on a trek to The Tiger's Nest, the main tourist attraction of Bhutan. It was a 10 hour trek. Trekking in the lap of nature, and breathing the divine air made us all forget the daily assignments and dreary routine of our college. Once we reached the top, the view was heavenly. The Tiger's Nest monastery stood majestically in between the mountains. We stayed there for 2 hours admiring the Buddhist architecture. And then we started the climb down. We were quite exhausted. In the evening we did souvenir shopping.

**Day 7 :** We had a break journey to Mumbai via Kolkata, where we got the chance to try Kolkata's famous "Puchka" and "rasgollas". And thus ended our journey to one of the most happiest countries in the world.

***Contact :* Yashashree Akadas**
**yashashree.akadas@yahoo.in**
**Gautam Upadhyay : 9833325265**
**Chidanand Bhagwat : 9819285372**

## *Annual Durga Pooja*

**Annual Durga Pooja** will be held on 24th September, 2017.

**Time : 3.00 p.m. onwards**

**Place :** Havyakara Sabagraha, Dipti Solitaire, 4th Floor, M.G. Road &
L.B.S. Marg Junction, Opp. Old Post Office, Ghatkopar (W),
Mumbai - 400 086.

Kumkumarchane will be performed by ladies seeking the blessing of Shreedevi. Meritorious students will be felicitated on that auspicious day. Bhajans will also be sung in praise of Durga Mata. There will be also Prasada Bhojanam. All members are requested to participate with family.

*PAGE DONATED BY :* ***SMT POORNIMA AKADAS & FAMILY***

# ಹಳೆ ವಿಷಯಕ್ಕೆ ಮರುಜೀವ ನೀಡಿದ ಕೃತಿ 'ಸದ್ಗತಿ'

✍ ವಿಶ್ವನಾಥ ದೊಡ್ಮನೆ

***(ಸದ್ಗತಿಯನ್ನು ಒದಗಿಸುವಲ್ಲಿ ಸ್ತ್ರೀಯರ ಕರ್ತೃತ್ವ ಸುಸಂಬದ್ಧತೆ ಮತ್ತು ಅನಿವಾರ್ಯತೆಯನ್ನು ವಿವರಿಸುವ ಗ್ರಂಥ)***

| | | | |
|---|---|---|---|
| ಕೃತಿ | : ಸದ್ಗತಿ | ಲೇಖಕರು | : ವಿಶ್ವನಾಥ ಮ. ಭಟ್ |
| ಬೆಲೆ | : ರೂ. 150/- | ಪುಟಗಳು | : 140 |
| ಮುದ್ರಣ | : 2016 | ಪ್ರಕಾಶಕರು | : ಸದ್ಗತಿ ಪ್ರಕಾಶನ, 9453665748 |




ಕೃತಿಯ ಹೆಸರು 'ಸದ್ಗತಿ'. ಹೆಸರೇ ಸೂಚಿಸುವಂತೆ ಇದು ಅಪರ ಕ್ರಿಯೆಗೆ ಸಂಬಂಧಿಸಿದ ವಿಚಾರದಿಂದ ಕೂಡಿದ ಪುಸ್ತಕ. ಕೃಷಿಕರು, ಪುರೋಹಿತರು, ಸಾಹಿತ್ಯಾಸಕ್ತರು, ಸಾಮಾಜಿಕ ಕಳಕಳಿಯುಳ್ಳ ವಿಶ್ವನಾಥ ಭಟ್ ಗೋಳಿಕೈ ಇವರು ಈ ಕೃತಿಯ ಕರ್ತೃ. ಪುತ್ರ ಸಂತಾನವಿಲ್ಲದೆ ಕೇವಲ ಸ್ತ್ರೀ ಸಂತಾನ ಭಾಗ್ಯವಿರುವವರು ತಂದೆ-ತಾಯಿಗಳ ಅಂತ್ಯಕ್ರಿಯೆಗಳನ್ನು ನೆರವೇರಿಸಲು ಅವಕಾಶವಿದೆ ಎಂಬುದನ್ನು ಆಧಾರ ಸಹಿತ ದಾಖಲಿಸಿದ ಕೃತಿ 'ಸದ್ಗತಿ'.

ಶ್ರೀಯುತ ವಿಶ್ವನಾಥ ಭಟ್ಟ ಪ್ರಾಥಮಿಕ ಶಿಕ್ಷಣ ಗೋಳಿಕೈಯಲ್ಲಿ . ಮುಂದೆ ಇಟಗಿಯ ಪಾಠಶಾಲೆಯಲ್ಲಿ ವೇದ ಮತ್ತು ಸಂಸ್ಕೃತ ಅಧ್ಯಯನವನ್ನು ಮಾಡಿರುವರು. ನಂತರ ಶ್ರೀ ಮನ್ಮಧ್ವ ಸಿದ್ಧಾಂತ ಪ್ರಭೋದಿನಿ ಮಹಾಪಾಠ ಶಾಲೆ ಉಡುಪಿ ಸಾಹಿತ್ಯಾಂತ ಸಂಸ್ಕೃತ ಅಧ್ಯಯನ, ಶ್ರೀ ಮೇಧಾ ದಕ್ಷಿಣಮೂರ್ತಿ ಮಹಾಪಾಠಶಾಲೆ ಗೋಕರ್ಣ ಇಲ್ಲಿ ನ್ಯಾಯಶಾಸ್ತ್ರ ನವೀನ ನ್ಯಾಯದ ವಿದ್ವತ್ ತರಗತಿ ಮುಗಿಸಿರುವರು. ಮುಂದೆ ಪಾರಂಪರಿಕ ಕೃಷಿ ಹಾಗೂ ಪುರೋಹಿತ್ಯದಲ್ಲಿ ವೃತ್ತಿ ನಿರತರು. ವೃತ್ತಿಯೊಂದಿಗೆ ಅಧ್ಯಯನಶೀಲರೂ ಆಗಿರುವ ಶ್ರೀಯುತರು ಸ್ತ್ರೀಯರಿಗೇಕೆ ಅಪರಕ್ರಿಯೆಯ ಹಕ್ಕಿಲ್ಲವೆಂದು ತಿಳಿಯುವ ಆಸಕ್ತಿಯಿಂದ ಸ್ವಅಧ್ಯಯನ ಕ್ಕಿಳಿದರು. ಅವರ ಅಧ್ಯಯನದ ಫಲವೇ 'ಸದ್ಗತಿ' ಕೃತಿ.

ಮಹಿಳೆಯರಿಗೆ ಅವರ ಹೆತ್ತವರ ಅತ್ಯೇಷ್ಠಿ ನಡೆಸುವ ಅವಕಾಶವಿದೆ ಎಂಬುದನ್ನು ತಿಳಿಯಲು ಶ್ರೀಯುತರು ವಾಜಸನೇಯ ಸಂಹಿತೆ ತೈತಿರೀಯ ಸಂಹಿತೆ, ತೈತಿರೀಯೋಪನಿಷತ್, ಯಾಸ್ಕರ ನಿರುಕ್ತ, ಬ್ರಾಹ್ಮಣ ಬೃಹದಾರಣ್ಯಕೋಪನಿಷತ್, ಶತಪತ ಬ್ರಾಹ್ಮಣ, ಮನುಸ್ಮೃತಿ, ಯಾಜ್ಞವಲ್ಕ ಸ್ಮೃತಿ, ಬೋಧಾಯನ ಧರ್ಮಸೂತ್ರ, ಬೋಧಾಯನ ಗೃಹಸೂತ್ರ, ಗೌತಮಧರ್ಮ ಸೂತ್ರ, ಅಪಸ್ತಂಬ ಧರ್ಮಸೂತ್ರ, ಪರಾಶರ ಸ್ಮೃತಿ, ವಿಷ್ಣು ಧರ್ಮ ಸೂತ್ರ, ಬೃಹದಾರಣ್ಯಕ್ಕೆ, ಶಂಕರಬಾಷ್ಯ, ಗೌತಮೀಯ ಅಪರ ಸೂತ್ರ ಪ್ರಕಾಶ, ಬ್ರಹ್ಮಾಂಡ ಪುರಾಣ, ಗರುಡ ಪುರಾಣ, ಸಾರೋದ್ಧಾರ, ವಿಷ್ಣು ಪುರಾಣ, ಸ್ಮೃತಿ ಚಂದ್ರಿಕೆ... ಸೇರಿದಂತೆ ಅನೇಕ ಗ್ರಂಥಗಳನ್ನು ಅಧ್ಯಯನ ಮಾಡಿ ಅವುಗಳ ಆಧಾರದಿಂದ ಮಹಿಳೆಗೂ ಅತ್ಯೇಷ್ಠಿ ಹಾಗೂ ನಂತರದ ಕ್ರಿಯೆಗಳ ಹಕ್ಕು ಇದೆ ಎಂಬುದನ್ನು 'ಸದ್ಗತಿ'ಯಲ್ಲಿ ವಿವರಣೆ ನೀಡಿ, ಹಳೆಯ ವಿಷಯಕ್ಕೆ ಹೊಸ ಜೀ ತುಂಬಿದ್ದಾರೆ

ಮಹಿಳೆಯರಿಗೆ ಅಪರ ಕ್ರಿಯೆಯ ಹಕ್ಕು ಹಿಂದೆ ಇತ್ತು. ಯಾವುದೋ ಕಾರಣದಿಂದ ಅವು ಪುರುಷರಿಗೆ ಮಾತ್ರ ಸೀಮಿತವಾಗಿದೆ. ಗಂಡು ಸಂತಾನವಿಲ್ಲದವರು ಕುಟುಂಬದ ಬೇರೆ ವ್ಯಕ್ತಿಯಿಂದ ಕರ್ಮಾಂಗ ಮಾಡಿಸುವ ಬದಲು ಅಂತ ಸಂದರ್ಭ ಬಂದಲ್ಲಿ ಪತ್ನಿ, ಹೆಣ್ಮಕ್ಕಳೇ ಮಾಡುವುದೊಳಿತು ಎಂಬುದನ್ನು 23 ಅಧ್ಯಾಯದಲ್ಲಿ ವಿವರಿಸಿರುವರು ಈ ಕೃತಿಗೆ ವಿದ್ವಾನ್ ಅನಂತ ಶರ್ಮಾ ಭುವನಗಿರಿ ಅವರ ಬೆನ್ನುಡಿ, ರಾಮಕೃಷ್ಣಾಶ್ರಮದ ಸ್ವಾಮಿ ಹರ್ಷನಂದರ ಆಶೀರ್ವಚನ, ಎಂ. ಎ. ಹೆಗಡೆ, ಶ್ರೀ ರಾಮಭಟ್ ಧಾರವಾಡ, ಜಸ್ಟಿಸ್ ರಾಮಾ, ಜೋಯಿಸ್ ಎಸ್. ಪಿ. ಶೇಷಗಿರಿ ಭಟ್, ವಿದ್ವಾನ್ ಗಂಗಾಧರ ಭಟ್, ಶ್ರೀಮತಿ ನೇತ್ರಾವತಿ ಗೌಡ ಅವರ ಅನಿಸಿಕೆಗಳು ಪೂರ್ವ ಮಾಹಿತಿ ಒದಗಿಸಿವೆ.

ಅಧ್ಯಾಯ 10ರಲ್ಲಿ ಬಹು ಉಪಯುಕ್ತ ವಿಷಯ. ಪತಿ-ಪತ್ನಿಯರ ಸಂಬಂಧದ ಅತಿಶಯತೆ ಲೇಖನವು ಎಲ್ಲ ಜನಾಂಗಕ್ಕೂ ಎಲ್ಲಾ ಕಾಲಕ್ಕೂ ಎಲ್ಲರಿಗೂ ಉಪಯೋಗವಾಗುವ ವಿಷಯದಿಂದ ಕೂಡಿದೆ. ಪತಿ-ಪತ್ನಿ-ಮದುವೆ, ದಂಪತಿಗಳ ಅನ್ಯೋನ್ಯತೆಗಳ ಕುರಿತು ವಿಸ್ತಾರವಾಗಿ ಮನಮುಟ್ಟುವಂತೆ ತಿಳಿಸಲಾಗಿದೆ. ಮಹಿಳೆಯರು ಕರ್ಮಾಂಗ ನಡೆಸಲು ಉಂಟಾಗುವ ತೊಡಕುಗಳು ಮತ್ತು ಅವುಗಳ ನಿವಾರಣೋಪಾಯ ಅಧ್ಯಾಯ 23ರಲ್ಲಿ ತಿಳಿಸಲಾಗಿದೆ. ಅಧ್ಯಾಯ 11ರಲ್ಲಿ ಆಸ್ತಿಯ ಹಕ್ಕುದಾರರೇ ಉತ್ತರಕ್ರಿಯೆಯನ್ನು ಮಾಡುವ ಅಧಿಕಾರಿಗಳು ಎಂಬುದನ್ನು ತಿಳಿಸಲಾಗಿದೆ. ಹಳೆ ವಿಷಯಕ್ಕೆ ಮರು ಜೀವ ತುಂಬಿದ ಈ ಕೃತಿ ವರ್ತಮಾನದ ಸಮಾಜಕ್ಕೆ ಬಹು ಉಪಯೋಗಿಯಾಗಿದೆ.

UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

***ADVT.***

*PAGE DONATED BY : **SHRI ROKESH HEGDE, DAHISAR & FAMILY***

# HAVYAKA WELFARE TRUST, MUMBAI



# Annual General Body Meeting & Vadhu-Varanveshana Shibira

**DATE : 10-9-2017, Sunday • TIME : 10.00 a.m. onwards**

**Venue : Havyakara Sabhagraha,** Dipti Solitaire, 4th Floor, M. G. Road & L.B.S. Marg Junction, Opp. Old Post Office, Ghatkopar (W), Mumbai - 400 086.

**PROGRAMME SCHEDULE :**

| | | |
|---|---|---|
| Registration | : | 10.00 A.M. |
| Elocution Competition for Youth wing (Age limit 15 to 30 Years) Topic-Generation gap Problems & Solutions | : | 10.30 A.M. to 11.30 A.M. |
| Bhava Geethe Kannada Singing Competition (Open for all) | : | 11.30 A.M. to 12.30 P.M. |
| Vadhu Varanveshana Shibira | : | 12.30 P.M. to 1.30. P.M. |
| Lunch Break | : | 1.30.P.M. to 2.30 P.M. |
| Annual General Body Meeting & Prize Distribution | : | 2.30 P.M. to 5.00 P.M. |

**Elocution Competition - time limit is 5 mins per participant.**

**Bhava Geethe singing Competition - time limit is 3 mins. per participant.**

**Musical instruments are not allowed**

**Each Competition has 3 prizes.**

**1st Prize Rs. 2000/-   2nd Prize Rs. 1500/-   3rd Prize Rs. 1000/-**

**Please enroll your name before 5th September 2017.**

***CONTACT :***

**Amita Bhagwat - 9819324284**
**Shashikala Hegde - 9869015917**
**Tanuja Hegde - 9869431749**
**G. V. Hegde - 9167434626/ 26652591**

**Shri Shivkumar Bhagwat**
President HWT

**Shri Narayan Akadas**
Secretary HWT

*PAGE DONATED BY : **SHRI ANANT GANESH BHAT, BANDRA & FAMILY***

# ಸೂರಿ ಪ್ರಶಸ್ತಿ ಪಡೆದು ಧನ್ಯನಾಗಿದ್ದೇನೆ

**(ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿಯನ್ನು ಸ್ವೀಕರಿಸಿ ಎಲ್. ಎಸ್. ಶಾಸ್ತ್ರಿಯವರಾಡಿದ ಮಾತುಗಳು)**

ಕನ್ನಡ ಪತ್ರಿಕಾ ರಂಗದ ಆದ್ಯ ಪುರುಷರಲ್ಲೊಬ್ಬರೂ ಪ್ರಾತಃಸ್ಮರಣೀಯರೂ ಆದ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಅವರ ಹೆಸರಿನ ಈ ಪ್ರಶಸ್ತಿಗೆ ಈ ಸಲ ನನ್ನನ್ನು ಪರಿಗಣಿಸಿದ ಮುಂಬೈನ ಹವ್ಯಕ ವೆಲ್ಫೇರ್ ಟ್ರಸ್ಟ್ ಅಧ್ಯಕ್ಷರಿಗೆ ಮತ್ತು ಎಲ್ಲ ಸದಸ್ಯರಿಗೆ ನನ್ನ ಮನಃಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ ಮತ್ತು ಅತ್ಯಂತ ಪ್ರೀತಿಯಿಂದ, ಅಭಿಮಾನದಿಂದ ಈ ಪ್ರಶಸ್ತಿ ಸ್ವೀಕರಿಸುತ್ತಿದ್ದೇನೆ. ಏಕೆಂದರೆ ಇದು ನಮ್ಮೂರ ಪ್ರಶಸ್ತಿ, ನಮ್ಮವರ ಪ್ರಶಸ್ತಿ. ಎಲ್ಲ ಪ್ರಶಸ್ತಿಗಳಲ್ಲೂ ಈ ಆತ್ಮೀಯ ಭಾವ ಇರುವುದಿಲ್ಲ. ನನಗೆ ಈ ತನಕ ದೊರಕಿರುವ ಹಲವು ಪ್ರಶಸ್ತಿಗಳಲ್ಲಿ ಎರಡು ಪ್ರಶಸ್ತಿಗಳು ಬಹಳ ಮಹತ್ವದ್ದೆಂದುಕೊಂಡಿದ್ದೇನೆ. ಒಂದು ಗಣಪತ್‌ರಾವ್ ಪಾಂಡೇಶ್ವರ ಪ್ರತಿಷ್ಠಾನದ ಪ್ರಶಸ್ತಿ, ಇನ್ನೊಂದು ಈ ಸೂರಿ ಶಾಸ್ತ್ರಿ ಪ್ರಶಸ್ತಿ. ಪಾಂಡೇಶ್ವರರು ಪತ್ರಿಕಾರಂಗದ ನನ್ನ ಮೊದಲ ಗುರು. ನನ್ನ ಆದರ್ಶ. ಪ್ರಾಮಾಣಿಕ, ದಿಟ್ಟ, ಧ್ಯೇಯನಿಷ್ಠ ಪತ್ರಕರ್ತರಾಗಿದ್ದರು. ಹಾಗೆಯೇ ಸೂರಿ ವೆಂಕಟರಮಣ ಶಾಸ್ತ್ರಿಯವರನ್ನು ನಾನು ತುಂಬ ಗೌರವದಿಂದ ಕಾಣುವುದು ಅವರ ಎರಡು ಬಗೆಯ ಸಾಹಸಗಳಿಗಾಗಿ. ಅವರನ್ನು ಕೇವಲ 'ಹವ್ಯಕ' ಎಂದು ಗುರುತಿಸಬೇಕಿಲ್ಲ. ಅವರೊಬ್ಬ ಧೀರ ಕನ್ನಡಿಗರು. 135 ವರ್ಷಗಳಷ್ಟು ಹಿಂದೆ ಮುಂಬಯಿಗೆ ಹೋಗಿ ಅಲ್ಲಿ ಛಾಪಖಾನೆ ಸ್ಥಾಪಿಸಿ, ಕನ್ನಡ ಪತ್ರಿಕೆ (ಹವ್ಯಕ ಸುಬೋಧ- ಹಿತೋಪದೇಶ) ಹೊರಡಿಸಿದ್ದು ಅಸಾಮಾನ್ಯ ಸಂಗತಿ. ಎರಡನೆಯದಾಗಿ ಆಗಿನ ಕಾಲದಲ್ಲಿ ವಿಧವಾ ವಿವಾಹದಂತಹ ವಿಷಯವನ್ನೆತ್ತಿಕೊಂಡು ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನದಂತಹ ಕ್ರಾಂತಿಕಾರಿ ಸಾಮಾಜಿಕ ನಾಟಕ ಬರೆಯುವ ಮೂಲಕ ಪ್ರವಾಹದ ವಿರುದ್ಧ ಈಜುವ ಧೈರ್ಯ ತೋರಿಸಿದ್ದು. 1960ರಲ್ಲೇ ಆ ನಾಟಕವನ್ನು ನಾವು ಕೆಲವರು ರಂಗಕ್ಕೆ ತಂದಿದ್ದೆವು. ಕನ್ನಡದಲ್ಲಿ ಹಲವು ಪ್ರಪ್ರಥಮಗಳನ್ನು ದಾಖಲಿಸಿದವರು ಸೂರಿಯವರು. ಕನ್ನಡದ ಪ್ರಥಮ ಸಾಮಾಜಿಕ ನಾಟಕ, ಪ್ರಥಮ ಪ್ರವಾಸ ಸಾಹಿತ್ಯ ಕೃತಿ ಇತ್ಯಾದಿ. ಉತ್ತರ ಕನ್ನಡದ ಪ್ರಪ್ರಥಮ ಪತ್ರಿಕೆಯೂ ಅವರದೇ ಎನ್ನಬಹುದು. ಇಂತಹ ಒಬ್ಬ ಧೀಮಂತ ಪತ್ರಕರ್ತರಾಗಿದ್ದ ಸೂರಿಯವರ ಹೆಸರಿನ ಪ್ರಶಸ್ತಿ ಪಡೆದು ನಾನು ಧನ್ಯನಾಗಿದ್ದೇನೆ.

1843 ರಲ್ಲಿ ಪ್ರಾರಂಭವಾದ ಕನ್ನಡ ಪತ್ರಿಕಾ ಲೋಕದ ಮೊದಲ 50-60 ವರ್ಷಗಳ ಅವಧಿಯಲ್ಲಿ ಎರಡು ಪ್ರಮುಖ ಅಂಶಗಳನ್ನು ನಾವು ಗಮನಿಸಬೇಕಾಗಿದೆ. ಅಂದು ಯಾರು ಬೇಕಾದವರೂ, ಬರೆಯಲು ಬಾರದವರು ಪತ್ರಿಕೆ ಹೊರ ತರುತ್ತಿರಲಿಲ್ಲ. ಕನ್ನಡ ಪಂಡಿತರು, ಶಿಕ್ಷಕರು, ಸಾಹಿತಿಗಳೇ ಹೆಚ್ಚಾಗಿ ಸಂಪಾದಕರಾಗಿರುತ್ತಿದ್ದರು. ಹಾಗೆಯೇ ಪತ್ರಿಕೆಯ ಮೂಲಕ ಸಮಾಜಕ್ಕೆ ನೀತಿ, ಧರ್ಮ, ಶಿಕ್ಷಣ, ಜ್ಞಾನ ಬೋಧನೆ ಮಾಡುವ ಉದ್ದೇಶ ಅವರಲ್ಲಿರುತ್ತಿತ್ತು. ಆಗಿನ ಪತ್ರಿಕೆಗಳ ಹೆಸರು ನೋಡಿದರೇ ಅದು ಸ್ಪಷ್ಟವಾಗುತ್ತದೆ. (ಉದಾ. ಸುಬುದ್ಧಿ ಪ್ರಕಾಶ, ಜ್ಞಾನ ಬೋಧಕ ಇತ್ಯಾದಿ) ಅಂದಿನ ಪತ್ರಕರ್ತರಲ್ಲಿ ಪ್ರಾಮಾಣಿಕತೆ, ಸಚ್ಚಾರಿತ್ರ್ಯ, ನಿರ್ಭೀತ ಮನೋವೃತ್ತಿ ಇವನ್ನೆಲ್ಲ ಕಾಣಬಹುದಿತ್ತು. ಸೂರಿ ಶಾಸ್ತ್ರಿಗಳು, ಪಾಂಡೇಶ್ವರರು, ಡಿವಿಜಿ., ಸಿದ್ಧವನಹಳ್ಳಿ ಕೃಷ್ಣ ಶರ್ಮ, ಬೆಟಗೇರಿ ಕೃಷ್ಣ ಶರ್ಮ ಮೊದಲಾದವರೆಲ್ಲ ಪತ್ರಿಕಾ ಕ್ಷೇತ್ರಕ್ಕೆ ಗೌರವ ತಂದ ಹಿರಿಯರು. ಶಿವರಾಮ ಕಾರಂತ, ಅನಕೃ, ಬಸವರಾಜ ಕಟ್ಟೀಮನಿ ಮೊದಲಾದ ಸಾಹಿತಿಗಳೂ ಪತ್ರಿಕೆಗಳನ್ನು ಹೊರತಂದಿದ್ದಾರೆ. ಇವರೆಲ್ಲರ ಮೂಲಕ ಕನ್ನಡ ಪತ್ರಿಕಾರಂಗ ತನ್ನ ಹಿರಿಮೆಯನ್ನು, ಪಾವಿತ್ರ್ಯವನ್ನು ಹೆಚ್ಚಿಸಿಕೊಂಡಿತ್ತೆಂಬುದನ್ನು ನಾವಿಂದು ಸ್ಮರಿಸಬೇಕಾಗಿದೆ.

ಆದರೆ ಇಂದು ಮಾಧ್ಯಮ ಕ್ಷೇತ್ರ ತಾಂತ್ರಿಕವಾಗಿ ಅತ್ಯದ್ಭುತ ಬೆಳವಣಿಗೆ ಕಂಡಿದ್ದರೂ ನೈತಿಕವಾಗಿ, ತಾತ್ವಿಕವಾಗಿ ಕುಸಿಯುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ. ಮಾಧ್ಯಮ ನಿಸ್ಸಂಶಯವಾಗಿ ಒಂದು ಪ್ರಬಲ ಶಕ್ತಿ. ಈ ಸಶಕ್ತ ಮಾಧ್ಯಮದ ಸಮರ್ಪಕ ಬಳಕೆಯಿಂದ ಮಾತ್ರ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ. ಇಂದು ಮಾಧ್ಯಮ ಕ್ಷೇತ್ರಕ್ಕೆ ಕಾಲಿಡುತ್ತಿರುವ ಹೆಚ್ಚಿನವರಲ್ಲಿ ಅಧ್ಯಯನದ ಕೊರತೆ ಇದೆ. ಭಾಷಾ ಶುದ್ಧಿಯಿಲ್ಲ. ಸಾಮಾನ್ಯ ಜ್ಞಾನ ಇಲ್ಲ. ಸಾಮಾಜಿಕ ಜವಾಬ್ದಾರಿಯೂ ಕಾಣುತ್ತಿಲ್ಲ. ಆದರೂ ಪತ್ರಕರ್ತರಾದ ತಕ್ಷಣ ನಾವು ಸರ್ವಜ್ಞರು, ಪ್ರಶ್ನಾತೀತರು ಎಂಬ ಭಾವನೆ ತಲೆಗೇರಿಸಿಕೊಂಡು ಎಲ್ಲದಕ್ಕೂ ನಾವೇ ತೀರ್ಪು ನೀಡಬಲ್ಲವರು. ನಾವೇ ನ್ಯಾಯಾಧೀಶರು ಎನ್ನುವಂತೆ ನಡೆದುಕೊಳ್ಳುವುದನ್ನು ಅನಗತ್ಯವಾಗಿ ಇತರರ ಚಾರಿತ್ರ್ಯವಧೆ ಮಾಡುವುದನ್ನು ನೋಡುತ್ತಿದ್ದೇವೆ. ಅಂತಹ ಹಕ್ಕು ನಮಗೆಲ್ಲಿದೆ? ಸಂವಿಧಾನವು ಪತ್ರಕರ್ತರಿಗೆ ಅಂತಹ ಯಾವ ವಿಶೇಷ ಅಧಿಕಾರ ನೀಡಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯ ಮಾತ್ರ ಇತರರಂತೆ ನಮಗಿದೆ, ಅಷ್ಟೇ.

ಆದ್ದರಿಂದ ಸಾಮಾಜಿಕ ಜವಾಬ್ದಾರಿ ಮತ್ತು ಬದ್ಧತೆಯೊಡನೆ, ನಮಗೆ ನಾವೇ ಸ್ವಯಂ ನೀತಿಸಂಹಿತೆಯ, ಸಂಯಮದ ಕಡಿವಾಣವನ್ನು ಹಾಕಿಕೊಂಡು ಮುನ್ನಡೆದರೆ ಅದರಲ್ಲೇ ಸಮಾಜದ ಹಿತ, ರಾಷ್ಟ್ರಹಿತ, ಅಷ್ಟೇ ಅಲ್ಲ, ನಮ್ಮ ಹಿತವೂ ಅಡಗಿದೆ. ಸೂರಿ ವೆಂಕಟರಮಣ ಶಾಸ್ತ್ರಿಯವರಂತಹ ಪತ್ರಕರ್ತರ ಆದರ್ಶವನ್ನು ನಮ್ಮೆದುರಿಗಿರಿಸಿಕೊಂಡು ಆ ಹಿರಿಯರು ರೂಪಿಸಿದ ಹಾದಿಯಲ್ಲಿ ನಡೆಯುವ ಮೂಲಕ ಮಾಧ್ಯಮ ಕ್ಷೇತ್ರದ ಗೌರವವನ್ನು ಹೆಚ್ಚಿಸಬೇಕಾಗಿದೆ.

ನಾನು ಪತ್ರಿಕಾರಂಗದೊಡನೆ ಸಾಹಿತ್ಯ, ಯಕ್ಷಗಾನ, ನಾಟಕ, ಸಂಗೀತ, ಗಮಕ ಮೊದಲಾದ ಕ್ಷೇತ್ರಗಳ ಕುರಿತಾಗಿಯೂ ಆಸಕ್ತಿ ಬೆಳೆಸಿಕೊಂಡು ನನ್ನ ಮಿತಿಯಲ್ಲಿ ಸಾಧ್ಯವಾದಷ್ಟು ಕೆಲಸ ಮಾಡುತ್ತ ಬಂದಿದ್ದೇನೆ. ಇದಕ್ಕೆ ಕಾರಣ ಬಾಲ್ಯದಿಂದಲೇ ನನಗೆ ದೊರಕಿದ ವಾತಾವರಣ. ವರಕವಿ ಬೇಂದ್ರೆ, ಅನಕೃ, ಗೌರೀಶ್ ಕಾಯ್ಕಿಣಿ, ಯಕ್ಕುಂಡಿ, ಅಕಬರ ಅಲಿ, ಬಿ. ಎಚ್. ಶ್ರೀಧರ, ಗೋಪಾಲಕೃಷ್ಣ ಅಡಿಗ ಮೊದಲಾದವರೆಲ್ಲ ಸಾಹಿತ್ಯ ಕ್ಷೇತ್ರದಲ್ಲಿ ನಾನು, ನನ್ನಂತೆಯೇ ಇತರ ತರುಣರು ಬೆಳೆಯಲು ಪ್ರೋತ್ಸಾಹಿಸಿದವರು. ಆ ಹಿರಿಯರಿಂದ ಬೆಳೆದ ನಾವು ಇಂದು ನಮ್ಮ ಮುಂದಿನ ಪೀಳಿಗೆಯ ಕಿರಿಯರನ್ನು ಪ್ರೋತ್ಸಾಹಿಸಿ ಬೆಳೆಸುವ ಕೆಲಸ ಮಾಡಬೇಕಾಗಿದೆ. ನಾನು ನನ್ನಿಂದ ಸಾಧ್ಯವಾದಷ್ಟು ಆ ಕೆಲಸ ಮಾಡಿದ್ದೇನೆಂಬ ತೃಪ್ತಿ ನನಗಿದೆ. ಇತರ ಕಲಾ ಕ್ಷೇತ್ರಗಳ ಅಭಿರುಚಿ ಬೆಳೆಸಿದ ಅನೇಕ ಹಿರಿಯರನ್ನು ನಾನಿಂದು ನೆನಪಿಸಿಕೊಳ್ಳುತ್ತೇನೆ. ಈ ದೃಷ್ಟಿಯಿಂದ ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ ನನ್ನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ನೆರವಾಯಿತು. ಇಂದು ನಾನು ಬೆಳಗಾವಿ ಜಿಲ್ಲೆಯಲ್ಲಿ ಗಳಿಸಿದ ಹೆಸರು, ಕೀರ್ತಿ, ಪಡೆಯುತ್ತಿರುವ ಗೌರವಗಳ ಹಿಂದೆ ನಮ್ಮ ಜಿಲ್ಲೆಯ ಕೊಡುಗೆ ಅಪಾರವಾಗಿದೆ. ಕಳೆದ 53 ವರ್ಷಗಳಿಂದ ಹವ್ಯಕ ವೆಲ್‌ಫೇರ್ ಟ್ರಸ್ಟ್ ಮುಂಬಯಿಯಲ್ಲಿ ಬೇರು ಬಿಟ್ಟು ಕನ್ನಡ-ಹವ್ಯಕ ಬಾಂಧವರನ್ನೆಲ್ಲ ಒಂದೆಡೆ ತಂದು, ಇಲ್ಲಿ ಹಲವು ಬಗೆಯ ಚಟುವಟಿಕೆಗಳನ್ನು ನಡೆಸಿ ಸಾಂಸ್ಕೃತಿಕ ಜೀವಂತಿಕೆಯನ್ನು ಕಾಪಾಡಿಕೊಂಡು ಬಂದಿರುವುದು ನಿಜಕ್ಕೂ ಅಭಿನಂದನಾರ್ಹ. ಅದರಲ್ಲೂ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಅವರ ಹೆಸರಿನ ದತ್ತಿನಿಧಿ ಸ್ಥಾಪಿಸಿ ಕಳೆದ ಹನ್ನೆರಡು ವರ್ಷಗಳಿಂದ ಪತ್ರಿಕೆ, ಕಲೆ, ಸಾಮಾಜಿಕ ಸೇವಾ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಗೈದವರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಸಹ ಪ್ರಶಂಸಾರ್ಹ. ಈ ಸಲ ಈ ಪ್ರಶಸ್ತಿ ಪಡೆಯುವ ಭಾಗ್ಯ ನನ್ನದಾಗಿದೆ. ಸಂಸ್ಥೆಯ ಎಲ್ಲ ಸದಸ್ಯರಿಗೂ ಮತ್ತೊಮ್ಮೆ ನಾನು ಧನ್ಯವಾದಗಳನ್ನು ಹೇಳುತ್ತಿದ್ದೇನೆ.

**- ಎಲ್. ಎಸ್. ಶಾಸ್ತ್ರಿ**

*PAGE DONATED BY :* ***SMT. KALA BHAGWAT, KHARGAR IN MEMORY OF MOTHER LATE SMT. GOURI BHAT***

# ಅಹಿಂಸಾಚಾರದ ದಾರಿಯಲ್ಲಿ

(ಕಳೆದ ಸಂಚಿಕೆಯಿಂದ)

✍ **ಗೋ. ಗೋ ಹೆಗಡೆ, ಕೋಡಗದ್ದೆ**

ಇದಾಗಿ ಮತ್ತೆ ಕೆಲವು ವರ್ಷಗಳ ಅನಂತರ ಸಿದ್ದಾಪುರ ಹೊನ್ನೆಗುಂಡಿ ಬಾಬುರಾಯರ ಹಳೆ ಮನೆಯಲ್ಲಿ ನಡೆದ ಘಟನೆ. ಆಗಿನ್ನೂ ಅವರು ಈಗಿನ ಹೊಸಮನೆ ಕಟ್ಟಿಕೊಂಡು ಬಂದಿರಲಿಲ್ಲ. ಈ ಮೂಲ ಮನೆಯ ಎಡಪಾರ್ಶ್ವದಲ್ಲಿ ನಾವು ವಾಸವಾಗಿದ್ದೆವು. ಒಟ್ಟು ಇದು ಐದು ಕುಟುಂಬಗಳ ವಠಾರವಾಗಿತ್ತು. ಆ ದಿನ ಬೆಳಗಿನ 9 - 15ರ ಸಮಯ. ನಾನು ಕಾಲೇಜಿಗೆ ಹೊರಡುವ ತಯಾರಿಯಲ್ಲಿದ್ದಾಗ ಮನೆಯ ಬಲ ಹಿಂಭಾಗದಿಂದ ಬಾಬೂರಾಯರ ಮಗಳು ಶಾಂತಾ 'ಅಯ್ಯೋ ಹಾವು' ಎಂದು ಕೂಗಿದ್ದು ಕೇಳಿಸಿತು. ಅಷ್ಟೇ ಅಲ್ಲ ನಾನು ಬರಬೇಕೆಂದು ಕರೆಯಲಿಕ್ಕೆ ಬಂದಳು. ನಾನು ಏನೇ ಇರಲಿ ನೋಡಿ ಬರುವಾ ಎಂದು ಹಿಂಭಾಗದ ಆ ಸ್ಥಳಕ್ಕೆ ಬಂದೆ. ಅಲ್ಲಿ ಅಮಟೆ ಮರದ ಅಡಿಯಲ್ಲಿ ವಠಾರದ ಹೆಂಗಳೆಯರೆಲ್ಲ ಜಮಾಯಿಸಿದ್ದರು. ಆಗ ಶಾಂತಾ 'ಜಿ. ಜಿ. ಹೆಗಡೆಯವರೇ, ಅದೋ ಕಟ್ಟಿಗೆ ಮನೆಯಲ್ಲಿ ಹಾವು ಇದೆ ಹೊಡೆಯಿರಿ' ಎಂದಳು. ನಾನು ಹತ್ತಿರ ಹೋಗಿ ನೋಡಿದೆ. ಕುದುರಬೆಳ್ಳ ಹಾವೊಂದು ಕೊಳೆ ಕಟ್ಟಿಗೆ ರಾಶಿಯ ಮಧ್ಯ ಕಪ್ಪೆ ನುಂಗಿ ಹರಿದಾಡಲಾಗದೆ ಮಲಗಿತ್ತು. ನನ್ನ ಅಹಿಂಸಾ ತತ್ವದ ಪ್ರಕಾರ ನಾವು ಹಾವನ್ನು ಕೊಲ್ಲಲಾರದವನಾಗಿದ್ದೆ. ಆ ಸಮಯ ವಠಾರದಲ್ಲಿ ಮತ್ತೆ ಯಾರೂ ಬಲ್ಲಾದ ಗಂಡಸರಿಲ್ಲದುದರಿಂದ ಎಲ್ಲರೂ ನಾನು ಹಾವನ್ನು ಕೊಲ್ಲಲಿರುವುದನ್ನು ನೋಡುವ ತವಕದಲ್ಲಿದ್ದರು. ನಾನು ಹೇಳಿದೆ - 'ಹರಿದಾಡುವ ಹಾವು, ಎಲ್ಲಿ ಇರುವುದಿಲ್ಲ? ಎಲ್ಲ ಕಡೆ ಇರುವಂಥದ್ದೇ. ಇನ್ನು ಸ್ವಲ್ಪ ಹೊತ್ತಿನಲ್ಲಿ ಅದು ತನ್ನ ಪಾಡಿಗೆ ತಾನು ಹೋಗುತ್ತದೆ ಇನ್ನು ನೀವೆಲ್ಲ ಹೋಗಬಹುದು' ಎಂದು ಹಿಂತಿರುಗಿ ತಲೆಗೆ ತಾಗುವಂತಿದ್ದ ಹಿತ್ತಲಕಡೆ ಭಾಗದ ಮನೆ ಸೂರನಡಿ ಸಾಕಷ್ಟು ಬಗ್ಗಿ ಒಳಕಾಲಿಡಬೇಕು ಅನ್ನುವ ಹೊತ್ತಿಗೆ ಶಾಂತಾ ಹೇಳುತ್ತಿದ್ದಳು. 'ಓಹೋ... ಇವರೂ ಒಬ್ಬರು ಗಂಡಸರು. ಹಾವು ಹೊಡೆಯುತ್ತಾರೆಂದು ಕರೆದರೆ ಹಾಗೆ ಹೊರಟು ಹೋದರು.' ಈ ಮಾತು ಕಿವಿಗೆ ಬಿದ್ದದ್ದೇ ಹಿಂತಿರುಗಿ ಕಟ್ಟಿಗೆ ಮನೆ ಹತ್ತಿರ ಬಂದೆ. ನನ್ನ ಗಂಡಸ್ತನಕ್ಕೆ ಸವಾಲಾದ ಧರ್ಮಸಂಕಟ ಪರಿಸ್ಥಿತಿಯಿಂದ ಮನಸ್ಸಿನಲ್ಲೇ ಪೇಚಾಡಿಕೊಂಡೆ. ಹೊಡೆಯುವಂತೆಯೂ ಇಲ್ಲ. ಹಾಗೆ ಹೋದರೆ ಅವಮಾನ ಸಹಿಸಬೇಕು. ಒಟ್ಟಿನಲ್ಲಿ ಧರ್ಮ ಸಂಕಟ. ಕುದುರು ಬೆಳ್ಳ ಎರಡು ಅಡಿ ಉದ್ದದ ಒಂದಿಂಚು ವ್ಯಾಸದ ಸಣ್ಣ ಹಾವಾಗಿತ್ತು. ಹೇಗೋ ಹರಿದಾಡುವ ಸ್ಥಿತಿಯಲ್ಲಿಲ್ಲ ನೋಡುವಾ ಎಂದು ಒಂದು ಇದ್ದದ್ದರಲ್ಲೇ ಉದ್ದನ ಕಟ್ಟಿಗೆ ಕೋಲನ್ನು ಹಿರಿದು ಹಾವಿನ ಮುಖದ ಹತ್ತಿರ ಹಿಡಿದೆ. ಹಾಗೆ ಹಿಡಿದದ್ದೇ ತಡ ಹಾವು ಆ ಕೋಲನ್ನು ಸುತ್ತಿಕೊಂಡಿತು. ಆಗ ನನ್ನ ಸಮಸ್ಯೆ ಬಗೆಹರಿದು ಹೋಯಿತು. ಕೂಡಲೇ ಹಾವು ಸುತ್ತಿಕೊಂಡ ಕೋಲನ್ನು ಹಿಡಿದು ಊರಾಚೆಯ ತೋಟದ ಕಾಲುವೆಯಲ್ಲಿ ಬಿಟ್ಟು ಬಂದೆ. ಅಂತೂ ಮರ್ಯಾದೆ ಉಳಿಸಿಕೊಂಡು ಅನಂತರ ಲಗುಬಗೆಯಿಂದ ಕಾಲೇಜಿಗೆ ಹೊರಟು ಹೋದೆ. ನನ್ನ ಈ ವರ್ತನೆ ಬಹುತೇಕ ಅಲ್ಲಿದ್ದವರಿಗೆ ವಿಚಿತ್ರವಾಗಿಯೇ ಕಂಡಿರಬೇಕು. ಇದೇ ರೀತಿ ನನ್ನ ಸತ್ಯಪಾಲನೆ ಕೂಡ ಸತ್ವಪರೀಕ್ಷೆಗೆ ಒಳಗಾದ ಸಂದರ್ಭಗಳಿವೆ. ಸತ್ಯ ಹೇಳಲಾರದ ಸಂದರ್ಭ ಮೌನ ವಹಿಸಿರಬಹುದು. ಆದರೆ ತಮಾಷೆಗಾಗಿ ಕೂಡ ಸುಳ್ಳನ್ನು ನಾನು ಹೇಳಿದ ಜ್ಞಾಪಕವಿಲ್ಲ. ಅಲ್ಲದೆ ದೇವರ ದಯದಿಂದ ಎಲ್ಲೂ ವ್ಯಾವಹಾರಿಕವಾಗಿ ಅಪ್ರಾಮಾಣಿಕ ಎನಿಸಿಕೊಳ್ಳುವ ಪ್ರಮೇಯ ಈವರೆಗೆ ಬಂದಿಲ್ಲ.

ಬಹುತೇಕ ನಾಯಿಗಳಿಂದಾಗಿ ನನ್ನ ಅಹಿಂಸಾಚಾರಕ್ಕೆ ಭಂಗ ಬಂದಷ್ಟು ಇನ್ನೊಂದರಿಂದ ಆಗಲಿಲ್ಲ ಎನ್ನಬೇಕು. ಎ. ಪಿ. ಎಂ. ಸಿ ಯಾರ್ಡ್ ಹತ್ತಿರ ಜಾಗ ಖರೀದಿಸಿ ಮನೆ ಕಟ್ಟಿಕೊಂಡು ಉಳಿದ ಮೇಲೆ ನನಗೆ ಇಂಥ ಅನುಭವ ಪ್ರಾರಂಭವಾಯಿತು. ನನ್ನ ಮನೆಗೆ ಹತ್ತಿರ ಒಂದು ಕಟ್ಟಿಗೆ ಮನೆ ಚಾಟು ಕಟ್ಟಿಕೊಂಡದ್ದೇ ಮುಳುವಾಗಿತ್ತು. ಆ ಕಟ್ಟಿಗೆ ಮನೆ ನಾಯಿ ಬಾಣಂತಿ ಮನೆಯಾಗಿ ಡಜನ್‌ಗಟ್ಟಲೆ ಮರಿಗಳು ಕೂರಿ (ಒಂದು ತರ ರೆಕ್ಕೆ ಇರುವ ಸಣ್ಣ ಇರುವೆ) ಮುತ್ತಿ ಕಡಿಯುವಾಗ ರಾತ್ರಿಯಿಡೀ ಅವು ಎಲ್ಲ ಖಂಯೋ ಕುರ್ರೋ ಕೂಗುತ್ತಿದ್ದವು. ನಿದ್ರಾಭಂಗವಾಗುತ್ತಿತ್ತು. ರಜಾದಿನಗಳಲ್ಲಿ ಅವುಗಳನ್ನೆಲ್ಲ ನೀರುಬಾನಿ ಹತ್ತಿರ ತಂದು ಒಂದೊಂದಾಗಿ ಗೆಮೆಕ್ಸಿನ್ ಉದುರಿಸಿ ಬಟ್ಟೆ ಸೊಪ್ಪಿನಿಂದ ಸ್ನಾನ ಮಾಡಿಸುವ ಪರಿಪಾಠ ಅಂಟಿಕೊಂಡಿತು. ಆಗ ಒಂದು ಜೀವದ ರಕ್ಷಣೆಗಾಗಿ ಸಾವಿರಾರು ಜೀವಗಳ ಹತ್ಯೆ ಮಾಡಬೇಕಾಗಿತ್ತು. ಗಂಡು ಮರಿಯನ್ನು ಅವರಿವರು ಒಯ್ಯುತ್ತಿದ್ದರು. ಆದರೆ ಹೆಣ್ಣು ಮರಿಗಳು ಹಾಗೇ ಉಳಿದು ಬಿಡುತ್ತಿದ್ದವು. ಅವುಗಳನ್ನು ಎರಡು ತಿಂಗಳ ಹೊತ್ತಿಗೆ ಸ್ವಲ್ಪ ದೊಡ್ಡದಾದ ಮೇಲೆ ಬೈಕಿನಲ್ಲಿ ದೂರ ಒಯ್ದು ಬಿಡುವ ದುಃಖ ಹೇಳತೀರದು. ಮರಿಗಳೆಲ್ಲ ಖಾಲಿ ಆದಾಗ ಆ ಹೆಣ್ಣು ನಾಯಿಗಳ ರೋದನ ಮುಗಿಲು ಮುಟ್ಟುತ್ತಿತ್ತು. ಅದರಲ್ಲೂ ನನ್ನಂತಹ ಪ್ರಾಣಿದಯೆ ಇರುವವನು ಸಹಿಸುವುದು ಕಷ್ಟವೇ ಆಗಿತ್ತು. ಹಾಗಂತ ನಾಯಿ ಸಂಸಾರ ಸಾಕುವುದು ಸಾಧ್ಯವಿಲ್ಲವಾಗಿತ್ತು. ಹೀಗಿರುತ್ತ ಕಾಲೇಜಿನಲ್ಲಿ ಇರುವಾಗ ಒಂದು ದಿನ ಸಂಜೆ ನಾಲ್ಕರ ಹೊತ್ತಿಗೆ ಮನೆಯಿಂದ ದೂರವಾಣಿ ಕರೆ ಬಂತು. ನಾಯಿಮರಿಯೊಂದು ಮನೆ ಹಿಂದಿನ ತಿರುವಿನಲ್ಲಿ ಬೈಕ್‌ಗೆ ಸಿಕ್ಕು ಹಿಂಗಾಲು ತೊಡೆ ಸಹಿತ ಜಖಂ ಆಗಿದೆ. ಬೇಗ ಬರಬೇಕೆಂದು ಮಗಳು ಕರೆಕೊಟ್ಟಳು. ಆಗ ಇನ್ನು ಎ.ಪಿ.ಎಂ.ಸಿ. ಕಂಪೌಂಡ್ ಗೋಡೆ ಆಗಿರಲಿಲ್ಲ. ಮನೆಗೆ ಬಂದು ನೋಡಿದಾಗ ನಾಯಿಮರಿ ಗೋಳು ನೋಡಲಾಗಲಿಲ್ಲ. ಮಗಳಿಗೆ ಅದನ್ನು ಎತ್ತಿಕೊಳ್ಳ ಹೇಳಿ, ದನದ ದವಾಖಾನೆಗೆ ಒಯ್ದು ಡಾಕ್ಟರರಿಂದ ದಯಾಮರಣ ಕೊಡಿಸಬೇಕಾಯಿತು. ಎರಡನೆ ಟ್ರಿಪ್ಪಿನಲ್ಲಿ ನನ್ನ ಮನೆಕೆಲಸ ಮುಂದುವರಿಸಿದಾಗ ಒಂದು ಹೆಣ್ಣು ನಾಯಿ, ತನ್ನ ಮರಿಗಳಿಗೆ ಆಹಾರವಾಗಿ ಹತ್ತಿರದ ಹೊಸೂರಿನಿಂದ ಕೋಳಿಮರಿ ಹಿಡಿದು ತರುವಾಗ ಕೋಳಿ ಮಾಲಿಕರಿಂದ ತಿಂದ ಏಟು ಬಾಯಿ ದವಡೆಗೆ ಬಲವಾಗಿ ಬಿದ್ದದ್ದರಿಂದ ಆ ನಾಯಿ ದಿನವಿಡೀ ಒದ್ದಾಡಿ ಪ್ರಾಣ ಬಿಟ್ಟಿತು. ಅದರ ಎರಡು ಹೆಣ್ಣುಮರಿಗಳು ಅನಾಥವಾದವು. ಅವುಗಳಿಗೆ ಪ್ರತಿದಿನ ಆಹಾರ ಹಾಕುವುದು ಅನಿವಾರ್ಯವಾಯಿತು. ಮನೆ ಕಟ್ಟೋಣದ ಕೆಲಸದ ಗಡಿಬಿಡಿಯಲ್ಲಿ ಈ ಎರಡು ಹೆಣ್ಣುಮರಿಗಳನ್ನು ಸಕಾಲದಲ್ಲಿ ದೂರಬಿಟ್ಟು ಬರುವುದು ಸಾಧ್ಯವಾಗಲೇ ಇಲ್ಲ. ಕೊನೆಗೊಂದು ದಿನ ಹಿಡಿಯ ಹೋದರೆ ಅವು ಕೈಗೆ ಸಿಗುತ್ತಿರಲಿಲ್ಲ. ಒತ್ತಾಯದಿಂದ ಹಿಡಿಯಲು ಕಚ್ಚಿಬಿಟ್ಟರೆ? ಎಂಬ ಹೆದರಿಕೆ ಬೇರೆ. ಈ ಎರಡು ಮರಿಗಳು ದೊಡ್ಡವಾದದ್ದೇ ತಡ ಶ್ರಾವಣ ಮಾಸದಲ್ಲಿ ವಿವಿಧ ದೇಶಾಧಿಪತಿಗಳಾದ ನಾನಾ ತರ ಗಂಡುನಾಯಿಗಳ ದಂಡು ನಮ್ಮ ಹಿತ್ತಲಲ್ಲಿ ಒಟ್ಟಾಗಿ ಸ್ವಯಂವರ ಏರ್ಪಡುತ್ತಿದ್ದವು.

ಆಗ ನಡೆಯುವ ಆ ರೌದ್ರಾವೇಶದ ಘನಘೋರ ಗಂಭೀರ ಕಾಳಗ, ಗದ್ದಲದ ದೃಶ್ಯಾವಳಿಗಳನ್ನು ಸಹಿಸಲಾಗುತ್ತಿರಲಿಲ್ಲ. ಈ ಎರಡು ಹೆಣ್ಣು ನಾಯಿಗಳು ಪ್ರತಿವರ್ಷ ಮರಿ ಹಾಕತೊಡಗಿದವು. ಗಂಡು ಮರಿಗಳನ್ನು

*PAGE DONATED BY : **SMT. MADHU AND SHRI S. M. HEGDE,** SANTACRUZ*

ಜನ ಒಯ್ದರೂ ಹೆಣ್ಣು ಮರಿಗಳ ಸಾಗಾಣಿಕೆ ಪ್ರಾರಬ್ಧ ಗಂಟಿಕ್ಕುತ್ತಿತ್ತು. ಮತ್ತೆ ಮರಿಗಳ ಸ್ನಾನ ಅವುಗಳಿಗೆ ಆಹಾರ ಸಾಟಿ ಸಂಸಾರ ಕಾಟ, ತಪ್ಪಿಸಿಕೊಳ್ಳಲು ದೂರಬಿಟ್ಟು ಬರುವ ಕಾಯಕ, ನನ್ನ ಮನಸ್ಸಿಗೆ ತುಂಬ ಹಿಂಸೆ ಕೊಡುತ್ತಿತ್ತು. ಹಾಗಂತ ಈ ಎರಡು ದೊಡ್ಡ ಹೆಣ್ಣು ನಾಯಿಗಳು ಮನೆ ಕಾಯುತ್ತಿರಲಿಲ್ಲ. ಮೀನು ಮಾರ್ಕೆಟ್‌ನಲ್ಲೋ, ಊರುಗಳಲ್ಲೆಲ್ಲೋ ಅಲೆದಾಡಿಕೊಂಡಿದ್ದು ಮಧ್ಯಾಹ್ನ ಊಟದ ಹೊತ್ತಿಗೆ ಬಾಲ ಬೀಸುತ್ತ ಹಾಜರಾಗುತ್ತಿದ್ದವು.

2000 ನೇ ಇಸ್ವಿಯಲ್ಲಿ ಮಗಳ ಮನೆ ಅಮೇರಿಕಾಕ್ಕೆ ಹೋಗಬೇಕಾಗಿ ಬಂದಾಗ ಈ ಎರಡು ನಾಯಿಗಳನ್ನು ಬಾಡಿಗೆ ಕಾರಿನಲ್ಲಿ ಒಯ್ದು ನೂರಾರು ಮೈಲು ದೂರ ಬಿಟ್ಟು ಬರಲು ಹಂಚಿಕೆ ಹಾಕಿ ಹಿಡಿಯಲು ಸಿಗದ ಈ ನಾಯಿಗಳಿಗೆ ದನದ ದವಾಖಾನೆಯಿಂದ ನಿದ್ದೆಗುಳಿಗೆ ತಂದದ್ದೂ ಆಯಿತು. ಮಸಾಲೆ ಅವಲಕ್ಕಿಯಲ್ಲಿ ನಿದ್ದೆ ಗುಳಿಗೆ ಪುಡಿ ಮಾಡಿ ಕಲಸಿ ಎರಡೂ ನಾಯಿಗಳಿಗೆ ನೀಡಿದ್ದಾಯಿತು. ಅವಲಕ್ಕಿ ಬರಿದಾಯಿತು. ಆದರೆ ನಾಯಿಗಳಿಗೆ ತಾಸೊಂದು ಕಳೆದರೂ ನಿದ್ದೆ ಮಾತ್ರ ಬರುವ ಲಕ್ಷಣ ಕಾಣಲೇ ಇಲ್ಲ. ಬಾಡಿಗೆ ಕಾರಿನವನಿಗೆ ರೂ. 50/- ದಂಡ ತೆತ್ತಿದ್ದೇ ಬಂತು. ಮತ್ತೆರಡು ವರ್ಷ ಕಳೆಯುವಲ್ಲಿ ನಾನು ಹೈರಾಣಾಗಿ ರೋಸಿ ಹೋದೆ. ಮತ್ತೆ ಎರಡನೇ ಬಾರಿ ಸ್ವಲ್ಪ ಹೈ ಡೋಸ್ ಇರುವ ನಿದ್ದೆಗುಳಿಗೆ ಹಾಕಿ ಆಹಾರದಲ್ಲಿ ಕೊಟ್ಟರೆ ಈ ನಾಯಿಗಳು ಅದನ್ನು ಮೂಸಿ ನೋಡಿ ಬಿಟ್ಟು ತಿನ್ನಲೇ ಇಲ್ಲ. ದನದ ದವಾಖಾನೆ ಡಾಕ್ಟರರಲ್ಲಿ ನನ್ನ ಸಮಸ್ಯೆಯನ್ನು ವಿವರಿಸಿ ಗನ್ ಶೂಟ್‌ನಿಂದ ನಿದ್ದೆ ಬರಿಸಲು ಸಾಧ್ಯವೇ ಎಂದು ಕೇಳಿದೆ. ಅದಕ್ಕವರು- ಆ ರೀತಿ ಮಾಡಲು ತಾಲೂಕಾ ದಂಡಾಧಿಕಾರಿಗಳ ಅನುಮತಿ ಬೇಕಾಗುತ್ತದೆ. ಅಲ್ಲದೆ ಈ ವ್ಯವಸ್ಥೆ ನಮ್ಮ ಸಿದ್ದಾಪೂರದಲ್ಲಿ ಇಲ್ಲವೆಂದು ತಿಳಿದಾಗ ಹತಾಶನಾದೆ. ಇದೇ ವೇಳೆ ನಾಯಿ ತನ್ನ ಮರಿ ಸತ್ತಾಗ ಕಾಲಿನಿಂದ ಮಣ್ಣನ್ನು ಕೆರೆದು ತಗ್ಗು ತೋಡಿ ಅದರಲ್ಲಿ ಮರಿಯನ್ನು ಬಾಯಿಂದ ಕಚ್ಚಿ ಹಾಕಿ ಮುಚ್ಚಿ ಸಮಾಧಿ ಮಾಡುವ ದೃಶ್ಯ ನೋಡಿ ಬೆರಗಾದದ್ದು ಇದೆ. ಒಂದು ದಿನ ಇಂತಹ ನಿರುಪಾಯ ಸ್ಥಿತಿಯಲ್ಲಿ ಎರಡಲ್ಲೊಂದು ಹೆಣ್ಣು ಅಂಗಳದಲ್ಲಿ ತ್ಯಾಜ್ಯ ವಸ್ತುಗಳನ್ನು ಸುಟ್ಟ ಬೂದಿಯಲ್ಲಿ ಕಣ್ಮುಚ್ಚಿ ಆರಾಮವಾಗಿ ಮಲಗಿತ್ತು. ನಾನು ಇದೇ ಸಮಯವೆಂದುಕೊಂಡು ದೊಡ್ಡ ಬೆತ್ತದ ಬುಟ್ಟಿಯೊಂದನ್ನು ಎತ್ತಿಕೊಂಡು ಹಿಂಬದಿಯಿಂದ ಕಾಣಿಸದಂತೆ ಬಂದು ಡುಬಕ್ಕನೆ ಮುಚ್ಚಿ ಹಿಡಿಯಲು ಪ್ರಯತ್ನಿಸಿದ್ದೇ ತಡ ಅದು ಮೇಲೆ ಚಿಮ್ಮಿದ ರಭಸಕ್ಕೆ ನಾನು ಮಾರು ದೂರ ಹೋಗಿ ಬಿದ್ದೆ. ಇಷ್ಟು ಬಲವಿರುವ ನಾಯಿಗಳು ತಮ್ಮ ಆಹಾರ ತಾವು ಸಂಪಾದಿಸಿಕೊಳ್ಳಲು ಸಮರ್ಥ ಇವೆ ಎಂಬುದು ಸಾಬೀತಾಯಿತು. ಅಲ್ಲಿಂದ ಮುಂದೆ ಅವುಗಳಿಗೆ ಊಟ ಹಾಕುವುದನ್ನು ನಿಲ್ಲಿಸಿದೆ. ಕಣ್ಣಿಗೆಕಂಡ ತಕ್ಷಣ ಕಟ್ಟಿಗೆ ತುಂಡು ಬಡಿಗೆಗಳನ್ನು ಸಂಗ್ರಹಿಸಿಟ್ಟುಕೊಂಡು ನಾಯಿಗಳತ್ತ ಬೀಸತೊಡಗಿದೆ. ಆದರೆ ಅವುಗಳಿಗೆ ತಾಕದಂತೆ ಕಾಳಜಿ ವಹಿಸಿದ್ದೆ. ಅಂತು ನಾಲ್ಕು ದಿನಗಳಲ್ಲಿ ಕಂಪೌಂಡ್ ಒಳಗೆ ಕಾಲಿಡಲು ಹೆದರಿ ಅವು ಹೊರಗೇ ದಾರಿಯಲ್ಲಿ ಅಡ್ಡಾಡತೊಡಗಿದವು. ಶನಿಗಳು ದೂರಾದವು. ಆದರೂ ದಾರಿಯಲ್ಲಿ ಕಂಡಾಗ ಬಾಲ ಅಲ್ಲಾಡಿಸುತ್ತಾ ಕಣ್ಣು ಪಿಳಿಪಿಳಿಗುಡಿಸುತ್ತಿದ್ದವು. ಈ ನಾಯಿ ಪ್ರಕರಣ ನನಗೆ ಹೇಸಿಗೆ ಹುಟ್ಟುವಷ್ಟಾದದ್ದರಿಂದ ಮುಂದೆಂದೂ ನಾನು ಯಾವ ನಾಯಿಯನ್ನೂ ಸಾಕುವ ಗೋಜಿಗೆ ಹೋಗಲಿಲ್ಲ. ಹೀಗೆ ಮನೆಯಿಂದ ಹೊರಗಟ್ಟಿದ ನಾಯಿಗಳಲ್ಲೊಂದು ವರ್ಷಾರು ತಿಂಗಳಲ್ಲಿ ಲಾರಿ ಅಡಿ ಆಗಿ ಸತ್ತಿತ್ತು. ಇನ್ನೊಂದು ಎಲ್ಲಿ ಹೋಯಿತೋ ತಿಳಿಯಲಿಲ್ಲ.

ಇನ್ನೊಂದು ಘಟನೆ ನನ್ನ ಅಹಿಂಸಾಚಾರಕ್ಕೆ ಸಂಪೂರ್ಣ ಭಂಗ ಬರುವಂತೆ ಆದದ್ದು ಕಡಜೀರಿಗೆ ಹುಳಗಳಿಂದ. ನಮ್ಮಲ್ಲಿಗೆ ಬಂದ ಹಲವರು ನನ್ನ ಮನೆ ಹಾಗೂ ಸುತ್ತಣ ವಿಶಾಲವಾದ ತೆಂಗಿನ ಹಿತ್ತಲ ಆವಾರ ಕಂಡು ನಿನ್ನ ಜಾಗ ತುಂಬಾ ಚೆನ್ನಾಗಿದೆ ಎಂದು ಹೊಗಳುತ್ತಿದ್ದುದು ಇತ್ತು. ಆದರೆ ನನ್ನ ಹಿತ್ತಲಿನ ವಿಶಾಲತೆಯೇ ಕಡಜೀರಿಗೆ ಹುಳಗಳ ಕಾಟಕ್ಕೆ ಕಾರಣ ಆಯಿತು. ಈ ಸಮಸ್ಯೆ ಬಂದದ್ದು ಒಂದಲ್ಲ ಎರಡಲ್ಲ ಮೂರು ಬಾರಿ. 1998 ರಲ್ಲಿ ಸಣ್ಣ ಮಾವಿನ ಗಿಡದಲ್ಲಿ ಕಡಜೀರಿಗೆ ಗೂಡು ಕಟ್ಟಿದವು. ಹಿತ್ತಲಲ್ಲಿ ಕೆಲಸ ಮಾಡುವಾಗ ಒಂದು ಹುಳ ತಲೆಯ ಮೇಲೆ ಕುಟುಕಿದಾಗ ಅದರ ವಿಷದಿಂದ ಆಗುವ ಅಸಾಧ್ಯವಾದ ನೋವು ಅರಿವಾಗಿತ್ತು. ಒಬ್ಬ ಸಾಯಲಿಕ್ಕೆ ಹತ್ತೇಹುಳ ಸಾಕು. ಅದನ್ನು ಮನೆಕಟ್ಟುವ ಕೆಲಸಗಾರರಿಂದ ಸುಡಿಸಿದೆ. ಹಾಗೆಯೇ 2010 ರ ವೇಳೆಗೆ ಮನೆ ಇದಿರಿನ ಅಶೋಕ ಗಿಡದಲ್ಲಿ ಕಡಜೀರಿಗೆ ಹುಳ ಮತ್ತೆ ಗೂಡು ಕಟ್ಟಿದ್ದವು. ನೋಡ ನೋಡುತ್ತಿರುವಲ್ಲಿ ದೊಡ್ಡ ಕೊಡದಷ್ಟು ಗಾತ್ರ ಬೆಳೆಯಿತು. ಇದನ್ನು ನೋಡಿದ ದಾರಿಯಲ್ಲಿ ಹೋಗುವ ಜನರೆಲ್ಲ ನನ್ನನ್ನು ಕರೆಕರೆದು ಅದನ್ನು ಸುಡಿಸಲು ಹೇಳಿ ಹೋಗುತ್ತಿದ್ದರು. ಹೆದರಿಕೆಗೆ ಕಾರಣ ಯಾರಾದರೂ ಮಕ್ಕಳು ಅದಕ್ಕೆ ಕಲ್ಲು ಹೊಡೆದರೆ? ಎನ್ನುವುದು. ಆದರೂ ಅಮಾವಾಸ್ಯೆ ರಾತ್ರಿ ಬರುವವರೆಗೆ ಕಾದು ಈ ಕೆಲಸದಲ್ಲಿ ಅನುಭವ ಇರುವವರಿಂದ ಹಳೆ ಗೋಣಿ ಚೀಲಗಳಿಗೆ ಚಿಮಣಿ ಎಣ್ಣೆ ಸುರಿಸಿ ಉದ್ದನ್ನ ಗಳೆಕೋಲಿಗೆ ಸುತ್ತಿ ಬೆಂಕಿ ಹಚ್ಚಿ ಹುಳಗಳು ಹರಿದಾಡಲಾಗದಂತೆ ಒಮ್ಮೆಲೇ ಬೆಂಕಿಯ ಜ್ವಾಲೆಗೆ ಸಜೀವ ದಹನಗೊಳ್ಳುವಂತೆ ಮಾಡುವುದಾಯಿತು. ಇದೇ ರೀತಿ ಇತ್ತೀಚೆಗೆ ಕಟ್ಟಿದ ಕಟ್ಟಿಗೆ ಮನೆ ತಗಡಿನ ಮಾಡಿನ ಒಳಗಡೆ ನನ್ನ ಲಕ್ಷ್ಯಕ್ಕೆ ಬಾರದೆ ಎರಡು ತಿಂಗಳ ಮೇಲೆ ಕಡಜೀರಿಗೆ ಗೂಡು ಕಟ್ಟಿದ ಪ್ರಮಾಣ ಕಂಡು ನಡುಗಿಹೋದೆ. ಅದನ್ನು ಈ ಮೇಲೆ ಹೇಳಿದ ತರ ಸುಡಲಾಯಿತು. ಆಗ ನನ್ನ ಅಹಿಂಸಾಚಾರ ಪ್ರಜ್ಞೆ ಒಳಗೊಳಗೆ ಕಣ್ಣೀರಿಡುತ್ತಿತ್ತು.

ನನ್ನ ಅಹಿಂಸಾಚಾರದಲ್ಲಿ ಇಲಿಗಳು ಸಹಿತ ನನ್ನನ್ನು ತಾಳ್ಮೆಗೆಡಿಸಿವೆ. ಸಾಕಷ್ಟು ಬಾರಿ ರೂಮಿನಲ್ಲಿ ಕೂಡಿಕೊಂಡು ಗೋಣಿ ಚೀಲದಲ್ಲಿ ತುಂಬಿ ದೂರಬಿಟ್ಟು ಬಂದಿದ್ದರೂ ಎರಡು ಇಲಿಗಳು ಮಾತ್ರ ಹೆದರಿಸಲು ಕೊಟ್ಟ ಹುಸಿಪೆಟ್ಟಿನಿಂದ ಅಳತೆ ತಪ್ಪಿ ಘಾಸಿಯಾದಾಗ ಒಂದೇ ಬಾರಿಗೆ ಕೊಂದು ಹೊರಗೆಸೆಯುವ ಸಂದರ್ಭ ಬಂದಿದ್ದನ್ನು ನಾನು ಒಪ್ಪಿಕೊಳ್ಳಲೇಬೇಕು.

ಬೌದ್ಧರು, ಜೈನರು ಹಿಂದೊಂದು ಕಾಲದಲ್ಲಿ ಅಹಿಂಸೆಯನ್ನು ವ್ರತವಾಗಿ ಆಚರಿಸುವಲ್ಲಿ ನೆಲದಲ್ಲಿ ನಡೆಯುವಾಗ ಹುಳ ಹುಪ್ಪಡಿಗಳು ಎಲ್ಲಿ ತುಳಿದು ಹೋದಿತೆಂಬ ಆತಂಕದಿಂದ ಚಾಮರ ಬೀಸಿಕೊಂಡು ನಡೆದಾಡುತ್ತಿದ್ದರಂತೆ. ಇಂತಹ ಅಹಿಂಸಾವ್ರತ ಯಾರಿಂದಲೂ ಈಗ ಸಾಧ್ಯವಿಲ್ಲ. ಅದಿರಲಿ ನನ್ನ ಮೈಮೇಲೆ ನುಸಿ ನೊರಜುಗಳು ಕುಳಿತು ರಕ್ತ ಕುಡಿಯುವಾಗ ನಾನವುಗಳನ್ನು ಕೊಲ್ಲದೆ ವಿಧಿಯೇ ಇಲ್ಲ. ಇಷ್ಟೆಲ್ಲ ಹೇಳುವಾಗ ಹಳೆ ಕಸ್ತೂರಿ ಮಾಸಪತ್ರಿಕೆ ಒಂದರಲ್ಲಿ ಬಂದ ಸ್ವಾರಸ್ಯವಾದ ನುಡಿಮುತ್ತು ನೆನಪಿಗೆ ಬರುತ್ತದೆ. ಅದು ಹೀಗಿದೆ ಅಹಿಂಸಾ ಪರಮೋಧರ್ಮಃ ಎಂದು ನಂಬಿರುವ ಸಿಂಹಳೀಯ ಬೌದ್ಧ ಬೆಸ್ತ ಜನಾಂಗದವರು ಕ್ರಿಮಿಕೀಟಗಳನ್ನು ಕೊಲ್ಲದಷ್ಟು ಪರಮ ದಯಾಳುಗಳು. ಅವರು ಮೀನುಗಳನ್ನು ನೀರಿನಿಂದ ಮಾತ್ರ ಹೊರ ತೆಗೆಯುತ್ತಾರೆ, ಕೊಲ್ಲುವುದಿಲ್ಲ. ನನ್ನ ಅಹಿಂಸಾಚಾರಕ್ಕೆ ಈ ವಿಡಂಬನೆ ಸರಿಹೋಲುತ್ತದೆಯೇನೋ ಎಂಬ ದುಗುಡ ಕಾಡುತ್ತದೆ.

*(ಆಧಾರ : ಮಾತು ತಾರಕ - ಮಾತೇ ಮಾರಕ)*

*PAGE DONATED BY :* ***SMT. SHANTA V. HEGDE,*** *CARMICHAEL ROAD*

# ಅನ್ಯೋನ್ಯತೆ

✍ ಶ್ರೀಮತಿ ವರಮಹಾಲಕ್ಷ್ಮೀ ಹೆಗಡೆ, ಸಿರ್ಸಿ

ಹೌದು, ನಾನೂ ಅನ್ಯೋನ್ಯವಾಗಿದ್ದೆವು ನಮ್ಮೊಳಗೆಂದೂ ಭಿನ್ನಾಭಿಪ್ರಾಯ ಬರಲೇ ಇಲ್ಲ. ಅವಳ ಸ್ವಭಾವವೇ ಹಾಗೆ. ಅವಳೇ ನನ್ನ ಸರಸ್ವತಕ್ಕ ವೀಣಾ ಅವಧಾನಿ! ನನಗಿಂತ ಮೂರ್ನಾಲ್ಕು ವರ್ಷ ಹೆಚ್ಚಿನ ಪ್ರಾಯದವಳು. ಮೊನ್ನೆ ಬೆಳಿಗ್ಗೆ ದೂರವಾಣಿ ಕರೆ ಎತ್ತಿದಾಗ ಆ ಕಡೆಯಿಂದ ಅಳುವ ಸ್ವರದಲ್ಲಿ 'ನಿನ್ನ ಸರಸ್ವತಕ್ಕ ಇನ್ನಿಲ್ಲ. ಇಂದು ಬೆಳಗಿನಜಾವವೇ ವಿಧಿವಶಳಾದಳು. ನಿನ್ನೆ ಸಂಜೆಯ ತನಕ ಬಂದವರೆಲ್ಲರೊಡನೆ ಮಾತನಾಡಿದ್ದಳು. ಎರಡು ಮೂರೇ ದಿನ ಆಸ್ಪತ್ರೆಯ ವಾಸವಾಗಿದ್ದಳು. ಯಾರಿಗೂ ತೊಂದರೆ ಕೊಟ್ಟವಳಲ್ಲ. ನಮಗೆಲ್ಲ ಕಲ್ಪನೆಯೇ ಇಲ್ಲ. ಇವಳು ಇಷ್ಟು ಬೇಗ ನಮ್ಮನ್ನಗಲಿ ಹೋಗುತ್ತಾಳೆ ಎಂಬುದು ನಂಬಲೂ ಅಸಾಧ್ಯವಾಗಿದೆ. ಪುಣ್ಯಾತ್ಮೆ ಯಾರಿಗೂ ತ್ರಾಸು ಕೊಡದೆ, ಹಸೆಯಾಳಾಗದೆ ಜೀವ ಬಿಟ್ಟಳು ಇತ್ಯಾದಿ ಕೇಳಿ ಒಮ್ಮೆ ಆಘಾತವಾಯಿತು. ಬಹಳ ಹೊತ್ತು ಬೇಕಾಯ್ತು ಚೇತರಿಸಿಕೊಳ್ಳಲು.'

ನಾನೂ ಅವಳೂ ಮೂಲದಲ್ಲಿ ಕಡತೋಕಾ - ಕೆಕ್ಕಾರು - ಹತ್ತಿರ ಹತ್ತಿರದ ಹಳ್ಳಿಯಲ್ಲಿ ಬೆಳೆದವರೇ ಲಗ್ನದ ನಂತರ ಒಂದೇ ಊರಿಗೆ ಮುಂಬೈದ ಪುಷ್ಪಾಪಾರ್ಕ್ ಏರಿಯಾಕ್ಕೆ ಬಂದು ಸೇರಿದೆವು. ಅವಳಿಗೆ ಆಗ ಶಂಕರ ಎಂಬ ಮುದ್ದಾದ ಮಗ - ನನ್ನನ್ನು ಬಹಳವಾಗಿ ಹಚ್ಚಿಕೊಂಡಿದ್ದ. ಚಿಕ್ಕಮ್ಮ ಅಂತ ನನ್ನನ್ನು ಕರೆಯುತ್ತಿದ್ದ. ಹೊರಗಡೆ ಕರೆದುಕೊಂಡು ಹೋಗು ಎಂದು ಹೇಳುತ್ತಿದ್ದ. ನಾನು ಅವನನ್ನೆತ್ತಿಕೊಂಡು ಟೆರೇಸಿಗೆ ಹೋಗಿ ಓಡಾಡಿಸುತ್ತ - ರಸ್ತೆ ದಾಟಿ ಆಚೆ ಕಡೆ ಇರುವ ನಮ್ಮ ಮನೆಗೂ ಒಯ್ಯುತ್ತಿದ್ದೆ. ನಮ್ಮ ಮನೆಯಲ್ಲಿ ಮಕ್ಕಳ ತಿಂಡಿ ಎಲ್ಲಿಡುತ್ತಾರೆ ಎಂದು ಆ ಚಿಕ್ಕ ಮಗುವಿಗೆ ಆಗಲೇ ತಿಳಿದಿತ್ತು. ಆ ಕಡೆಗೇ ಕೈತೋರಿಸುತ್ತ ಕೊಡು ಎಂದು ಹೇಳುತ್ತಿದ್ದ. ತಿಂಡಿ ತಿಂದು ನಲಿದಾಡುತ್ತಿದ್ದ. ನಮ್ಮ ಮನೆಯವರಿಗೆ ಹೆಗಡೆ ಕಾಕಾ ಎನ್ನುತ್ತಿದ್ದ.

ಅವಳು ನನಗಿಂತ ಮೊದಲೇ ಲಗ್ನವಾಗಿ ಮುಂಬೈ ಸೇರಿದ್ದಳು. ಶಾಲೆಯಲ್ಲಿ ಹೆಚ್ಚು ದಿನ ಕಳೆದವಳಲ್ಲವಾದರೂ ಮುಂಬೈಯ ಸ್ಥಾನಿಕ ಭಾಷೆ - ಮರಾಠಿ-ಗುಜರಾತಿ-ಹಿಂದಿಗಳನ್ನು ವ್ಯಾವಹಾರಿಕ ಅವಶ್ಯಕತೆಗೆ ತಕ್ಕಂತೆ ಕಲಿತಿದ್ದಳು. ನಾನು ಮುಂಬೈ ಸೇರಿದ ನಂತರ ಅವಳೊಡನೆ ಬೆರೆತುಹೋದೆ.

ಆ ದಿನಗಳಲ್ಲಿ ಭಾರತದ ಆಹಾರ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಪಡಿತರ ಚೀಟಿ ಇದ್ದರೂ ವಿತರಿಸುವ ಧಾನ್ಯ ಅದರಲ್ಲೂ ಅಕ್ಕಿ ಸಾಕಷ್ಟು ಸಿಗುತ್ತಿರಲಿಲ್ಲ. ಹೊರಗಡೆಯೂ ಅಕ್ಕಿ ಸಿಗುತ್ತಿರಲಿಲ್ಲ. ಪಕ್ಕದ ಜಿಲ್ಲೆ ಥಾಣೆಯಲ್ಲಿ ಮುಕ್ತ ವ್ಯಾಪಾರವಿತ್ತು. ತಿಂಗಳಿಗೊಂದು ಸಂತೆ. ನಾವು ಬೆಳಿಗ್ಗೆ ಗಂಡಸರು ಕರ್ತವ್ಯಕ್ಕೆ ಹೊರಹೋದ ಮೇಲೆ ತಯಾರಾಗಿ ಎರಡು ಚೀಲ ಹಿಡಿದುಕೊಂಡು ಪಶ್ಚಿಮ ರೈಲ್ವೆಯಲ್ಲಿ ರಿಟರ್ನ್ ಟಿಕೇಟು ಪಡೆದು ವಿರಾರಕ್ಕೆ ಹೋಗುತ್ತಿದ್ದೆವು. ಅಲ್ಲಿ ಸ್ಟೇಶನ್ ಪಕ್ಕದಲ್ಲೇ ಸಂತೆ. ಸಾಮಾನ್ಯವಾಗಿ ಹಳ್ಳಿಯ ಹೆಂಗಸರು ಒಂದೆರಡು ತರದ ಅಕ್ಕಿಯನ್ನು ರಾಶಿ ಹಾಕಿ ರಸ್ತೆ ಬಳಿ ಕುಳಿತಿರುತ್ತಿದ್ದರು. ಆಗ ಅಲ್ಲಿ 'ಕೋಲಂ ಚೋಖಾ' ಎಂದು ಹೆಸರಾದ ಹಳದಿ ಕಾಳುಗಳ ಮಿಶ್ರಣದ ಸಣ್ಣ ಅಕ್ಕಿ ಕಡಿಮೆ ದರದಲ್ಲಿ ಸಿಗುತ್ತಿತ್ತು. ನಾವು ಒಂದೊಂದು ಚೀಲದಲ್ಲಿ ಐದೈದು ಕೆ.ಜಿ. ಅಕ್ಕಿ ತುಂಬಿಸಿ ಲಗುಬಗೆಯಲ್ಲಿ ಪುನಃ ವಿರಾರ್ ಸ್ಟೇಶನ್‌ನಿಂದ ಮಲಾಡಕ್ಕೆ ಬಂದು ಮಲಾಡ್‌ನ ಮನೆಯಲ್ಲಿ ಅಕ್ಕಿ ಸುರಿದು ತುಂಬಿಸಿ ಬಾಯಾರಿಕೆಯನ್ನು ತೀರಿಸಿ ಪುನಃ ಅದೇ ರೀತಿ ವಿರಾರಕ್ಕೆ ಬರುತ್ತಿದ್ದೆವು. ಬೇರೆ ಟಿಕೇಟ್ ತೆಗೆಯುತ್ತಿರಲಿಲ್ಲ. ಅದೇ ಟಿಕೇಟನ್ನು ಚಲಾಯಿಸುತ್ತಿದ್ದೆವು. ಅದೇ ಅಕ್ಕಿ ಸಾಗರಣೆ. ಮೇಲಾಗಿ ಅಲ್ಲಿ ಸಿಗುವ ಹಳ್ಳಿ ತರಕಾರಿಗಳನ್ನೇನಾದರೂ ಖರೀದಿಸಿ ಚೀಲದಲ್ಲಿ ತುಂಬಿ ತರುತ್ತಿದ್ದೆವು. ಇನ್ನೊಂದು ಸಂತೆಯ ತನಕ ಮನೆಯಲ್ಲಿ ಅಕ್ಕಿ ಬಗ್ಗೆ ಚಿಂತಿಸಬೇಕಾಗಿರಲಿಲ್ಲ. ಹೀಗೆ ನಮ್ಮ ಒಡನಾಟ. ಬಹುಕಾಲ ಒಂದೇ ಮನೆಯಂತವರಾಗಿ ಬಿಟ್ಟಿದ್ದೆವು. ಆದರೆ ನಾವೇ ಮುಂಬೈ ಮೊದಲು ಬಿಡಬೇಕಾಯಿತು.

ವಾರ್ಷಿಕವಾಗಿ ರಜಾ ದಿನಗಳನ್ನು ನೋಡಿ ಎಲ್ಲಿಯಾದರೂ 'ಪಿಕ್‌ನಿಕ್'ಗೆ ನಮ್ಮೆರಡೂ ಪರಿವಾರದವರು ಒಟ್ಟಾಗಿ ತಿಂಡಿ-ತೀರ್ಥ ಕಟ್ಟಿಕೊಂಡೇ ನ್ಯಾಶನಲ್ ಪಾರ್ಕ್, ಆರೇಮಿಲ್ಕ್ ಕಾಲನಿ, ಜುಹೂಬೀಚ್, ಅಲಿಬಾಗ್ ಗಾರ್ಡನ್ಸ್, ವಜ್ರೇಶ್ವರಿ, ಪವ್ವಾ ಲೇಕ್ ಹೀಗೆ ಹೋಗಿ ಬರುತ್ತಿದ್ದೆವು. ನಮ್ಮ ಸರಸ್ವತಕ್ಕನ ಮನೆಗೆ ರಜಾದಿನಗಳಲ್ಲಿ ಬರಹೋಗುವವರು ಅನೇಕರು. ಅವರಿಗೆಲ್ಲಾ ಆದರಾತಿಥ್ಯವನ್ನು ಪ್ರೀತಿಯಿಂದ ಮಾಡುವ ಸರಸ್ವತಕ್ಕನ ಉದಾರತೆ ನೆನೆಯಲೇಬೇಕು. ಪತಿಯ ನೌಕರಿ ಅಂಚೆ ಖಾತೆಯಲ್ಲಿ ಹೆಚ್ಚಿನ ಸಂಬಳವೇನೂ ಇಲ್ಲ. ಆದರೂ ಅವರು ಓವರ್‌ಟೈಂ ಕೆಲಸ ಮಾಡಿ ರಾತ್ರಿ ಪಾಳಿ ಮುಗಿಸಿ ಬೆಳಿಗ್ಗೆ ಮನೆ ಸೇರುತ್ತಿದ್ದರು. ಇವರ ಊರಿನ ಮೂಲ ಮನೆಯಲ್ಲೂ ಆಸ್ತಿಪಾಸ್ತಿ ಅಂತ ಇರಲಿಲ್ಲ. ಸರಸ್ವತಕ್ಕನ ತವರಿನವರೂ ಕೆಳ ಮಧ್ಯಮ ವರ್ಗದವರು. ಅಂತಹ ಪರಿಸ್ಥಿತಿಯಲ್ಲಿ ಬೆಳೆದು ಬಂದ ಸರಸ್ವತಕ್ಕ ಜೀವನ ಮಾರ್ಗ ಬಲ್ಲವರಾಗಿದ್ದರು. ಮೈದುನರಿಬ್ಬರು ಆಗ ತಾನೆ ಪದವಿ ಗಳಿಸಿ ಸಣ್ಣ ನೌಕರಿಯಲ್ಲಿ ಸೇರಿಕೊಂಡಿದ್ದರು. ಒಬ್ಬ ಇವರ ಸಂಗಡವೇ ಇರುತ್ತಿದ್ದ.

ಊರಿನಲ್ಲಿ ವೃದ್ಧ ತಂದೆ-ತಾಯಿ, ಮೈದುನರು ಎರಡು ಜನ ಇನ್ನೂ ಶಾಲೆ-ಕಾಲೇಜು ಅಂತ ವಿದ್ಯಾರ್ಜನೆಯಲ್ಲಿದ್ದರು. ಇವರು ಅವರ ಖರ್ಚು ಕಾಯಿಲೆಗಳಿಗೆ ಹಣ ಆಗಾಗ ರವಾನಿಸಬೇಕಾಗಿತ್ತು. ನಾದಿನಿಯರ ಮದುವೆ ಮೈದುನರ ಮದುವೆ ಅಂತ ತಿಂಗಳುಗಟ್ಟಲೆ ಮೊದಲೇ ಪತಿಯೊಡನೆ ಊರಿಗೆ ಹೋಗಿ ಎಲ್ಲಾ ಜವಾಬ್ದಾರಿ ಹೊತ್ತು ಅವನ್ನೆಲ್ಲಾ ಸರಿಯಾಗಿ ಪೂರೈಸಿ ಮುಂಬೈಗೆ ಮತ್ತೆ ಮರಳುವಾಗ ಕೈಖಾಲಿ.

ನಾವಿಬ್ಬರೂ ಪ್ರತಿದಿನ ಭೇಟಿಯಾಗುತ್ತಿದ್ದೆವು. ಪರಸ್ಪರರ ಸುಖ-ದುಃಖಗಳನ್ನು ಹೇಳಿ ಹಂಚಿಕೊಳ್ಳುತ್ತಿದ್ದೆವು. ನಮ್ಮ ಮನೆಯವರೂ ಅವರ ಮನೆ ಜನರಲ್ಲೊಬ್ಬರಾಗಿ ಹೋಗಿದ್ದರು. ರವಿವಾರ ಬಂತೆಂದರೆ ಗೆಳೆಯರು ತಮ್ಮ ಹೆಂಡಂದಿರೊಡನೆ ಮಧ್ಯಾಹ್ನದ ನಂತರ ಹಾಜರಾಗುತ್ತಿದ್ದರು. ಹೆಂಡಂದಿರು ಬೇರೆ ಕಡೆ ಗಪ್ಪ ಹೊಡೆಯುತ್ತಾ ಕೂತರೆ ಗಂಡಸರು ಪಟ್ಟಾಂಗ ಹೊಡೆಯುತ್ತಾ ಇಸ್ಪೀಟು ಆಟದಲ್ಲಿ ನಿರತರಾಗುತ್ತಿದ್ದರು. ಸಂಜೆಯಾಗುವವರೆಗೂ ನಡೆಯುತ್ತಿತ್ತು. ಮತ್ತೊಂದು ರಜೆಯಲ್ಲಿ ಹಾಗೆಯೇ ಇನ್ನೊಬ್ಬರ ಮನೆಗೆ ಹೋಗುತ್ತಿದ್ದರು ಹೀಗಿತ್ತು ಒಡನಾಟ.

ದಿ. ಸರಸ್ವತಕ್ಕ ಒಬ್ಬ ಸರಳಜೀವಿ. ಮಧ್ಯಮ ವರ್ಗದ ಜೀವನದಲ್ಲೇ ತನ್ನೆಲ್ಲ ಸುಖವನ್ನು ಕಂಡುಕೊಂಡವಳು. ಭಾರೀ ಗಾತ್ರದ ಶರೀರವಲ್ಲ. ಚುರುಕಾಗಿ ಓಡಾಡಿ ತನ್ನೆಲ್ಲ ಕೆಲಸಗಳನ್ನು ನೌಕರ ಚಾಕರರಿಲ್ಲದೆ ಮಾಡಿಕೊಂಡು ಬಂದವಳು. ಇವಳಿಗೆ ಇಬ್ಬರು ಗಂಡು ಮಕ್ಕಳು. ಕಿರಿಯವ ನಾರಾಯಣ. ಅವನನ್ನು ದೊಡ್ಡವನನ್ನಾಗಿ ಮಾಡಲು ಗಂಡ- ಹೆಂಡತಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಅವನು ಹುಟ್ಟಾ ದಮ್ಮಿನ ಪ್ರಕೃತಿಯವ ಅಂತೂ ಎರಡು ಮಕ್ಕಳನ್ನು ಬೆಳೆಸಿ ಅವರಿಗೆ ಮದುವೆ ಮಾಡಿಸಿದ ಶ್ರೇಯ ಸರಸ್ವತಕ್ಕನಿಗೆ. ಈಗ ಹಿರಿಯ ಮಗ ಶಂಕರನ ಮಗ ವೈದ್ಯರ ನಿರ್ಲಕ್ಷವೆನ್ನುವ

PAGE DONATED BY : ***SHRI V. G. BHAT, NIGDI***

ಕಾರಣವೋ ಏನೋ. ಇನ್‌ಕ್ಯೂಬಿಲೇಟರ್‌ನಲಿಟ್ಟವನಿಗೆ ಪ್ರಾಣವಾಯು ಅವಶ್ಯಕತೆಗಿಂತ ಹೆಚ್ಚಾಗಿ ಕೊಟ್ಟ ಪರಿಣಾಮವೋ ಏನೋ ಅವನ ಬೆನ್ನುಹುರಿಯೇ ಬೆಳೆಯದೇ ಬಳುಕುವ ಬಳ್ಳಿಯಂತೆ ಇಂದಿಗೂ ಪರಾವಲಂಬಿ. ಅವನೇ ವಿನಾಯಕ ಸರಸ್ವತಕ್ಕನ ನೆಚ್ಚಿನ ಮೊಮ್ಮಗ. ಅವನೂ ಬುದ್ಧಿಯಲ್ಲಿ ಪ್ರೌಢ. ಶರೀರದಿಂದಲ್ಲ. ತನ್ನ ಕೊನೆಯ ಹಂತದಲ್ಲೂ ತನ್ನ ಕ್ರಿಯಾಕರ್ಮಗಳನ್ನು ಎಲ್ಲೋ ದೂರ ಮಾಡಿದರೆ ವಿನಾಯಕನಿಗೆ ವೀಕ್ಷಿಸಲಸಾಧ್ಯವೆಂದು ಹತ್ತಿರದ ಪೇಜಾವರ ಮಠದಲ್ಲೇ ಮಾಡಬೇಕೆಂಬ ಆಕಾಂಕ್ಷೆಯನ್ನು ಹೇಳಿದ್ದಾಳೆ. ಅಂತಹ ಸ್ನೇಹಶೀಲೆ. ಎಷ್ಟೇ ಶುಶ್ರೂಷೆ ಮಾಡಿದರೂ ವಿನಾಯಕ ಎದ್ದು ಕೂರಲೇ ಇಲ್ಲ. ಮೊಮ್ಮಗನನ್ನು ಬಾಲವಾಡಿಗೆ ಇತರ ಮಕ್ಕಳೊಡನೆ ಬೆರೆಯಲೆಂದು ಸೈಕಲ್ ಮೇಲೆ ಬಿಗಿದು ಕೂಡ್ರಿಸಿ ಸೈಕಲ್ ದೂಡಿಕೊಂಡೇ ಹೋಗಿ ಇವಳ ಪತಿ ಶ್ರೀ ತಿಮ್ಮಣ್ಣ ಅವಧಾನಿಯವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಕಷ್ಟದಲ್ಲೇ ಇನ್ನೊಂದು ಸಂಕಷ್ಟ. ಎಲ್ಲವನ್ನು ಎದುರಿಸಿಕೊಂಡು ಬಂದ ಸರಸ್ವತಕ್ಕ ತಮ್ಮ ಸೊಸೆಯಂದಿರೂ ಹಾಗೂ ಮಕ್ಕಳ ಬಗ್ಗೆ ತಮ್ಮನ್ನು ಚೆನ್ನಾಗಿ ನೋಡಿಕೊಂಡು ಬರುತ್ತಿದ್ದಾರೆ ಎಂದು ಎಂಟು ದಿನಗಳ ಹಿಂದೆ ನಮ್ಮ ಮನೆಯವರಿಗೆ ದೂರವಾಣಿಯಲ್ಲಿ ಹೇಳಿಕೊಂಡಿದ್ದಾಳೆ. ದುರ್ದೈವದಿಂದ ನಾನು ಆ ಹೊತ್ತಿಗೆ ಎಂದಿನಂತೆ ಸಂಜೆಯ ವಾಕಿಂಗ್‌ಗೆ ಹೋಗಿದ್ದೆ. ಮತ್ತೆ ಫೋನ್ ಮಾಡುತ್ತೇನೆ ಎಂದಿದ್ದಳು. ಆದರೆ ಆ ವಿಧಿ ಅಂತಹ ಸಂದರ್ಭವನ್ನು ಕಸಿದುಕೊಂಡ.

ಈ ಮಳೆಗಾಲದ ನಂತರ ಊರ ಕಡೆಗೆ ಬಂದು ಕೆಲವರನ್ನಾದರೂ ಮುಖತಃ ಭೇಟಿ ಮಾಡಬೇಕೆಂಬ ಆಸೆ ಇತ್ತು. ಅದನ್ನು ಅವಳು ನನ್ನಲ್ಲಿ ಹೇಳಿಕೊಂಡಿದ್ದಳು. ಆದರೆ ವಿಧಿ ಬಿಡಲಿಲ್ಲ. ಕೊನೆಗೂ ತನ್ನ ವೃದ್ಧ ಗಂಡನನ್ನು ನೋಡಿಕೊಳ್ಳಲು ಸೊಸೆಯರು ಚೆನ್ನಾಗಿದ್ದಾರೆ ಎಂಬ ಸಮಾಧಾನ ಅವಳಿಗಿತ್ತು. ಅದನ್ನೂ ವ್ಯಕ್ತಪಡಿಸಿದ್ದಾಳೆ. ಅವಳಿಗೆ ಧಾರ್ಮಿಕ ವಿಧಿ ವಿಧಾನಗಳ ಮೇಲೆ ಶ್ರದ್ಧೆ ಇತ್ತು. ಮುತ್ತೈದೆಯರಿಗೂ ಸನ್ಮಾನ ಮಾಡುತ್ತಿದ್ದಳು. ಕೊನೆಗೂ ಮುತ್ತೈದೆತನದಲ್ಲೇ ಪ್ರಾಣಬಿಟ್ಟು ಧನ್ಯಳಾದ ಅವಳಿಗಿದೊಂದು ಶ್ರದ್ಧಾಂಜಲಿ ಲೇಖನ.

# ಕೃಷ್ಣ

– ಶಾಂತಾ ಶಾಸ್ತ್ರಿ

ಎರಡು ತಾಯಿ ತಂದೆ
ಒಲವು ಮಾತ್ರ ಒಂದೆ ಎಂದೆ
ಮಾವ ಕಂಸನಿಂದೆ
ಈ ಸೌಭಾಗ್ಯ ದೊರೆಯಿತೆಂದೆ !!

ದ್ವಾಪರದಿ ರಾತ್ರಿ ಜನಿಸಿದೆ
ಗೊಲ್ಲರೊಡನೆ ಸೇರಿ ಬೆಳೆದೆ
ಮೊಸರು ಬೆಣ್ಣೆ ಕದ್ದು ಮೆದ್ದೆ
ಕೊಳನೂದಿ ಎಲ್ಲರ ಗೆದ್ದೆ !!

ಗೋಪಿಯರ ಬಂಧನವ ಬಿಡಿಸಿದೆ
ವೃಂದಾವವನೆ ಸೃಷ್ಟಿ ಮಾಡಿದೆ
ರಾಸಲೀಲೆಯಲಿ ರಮಿಸಿದೆ
ಜಗದ ಮಾನವ ಉಳಿಸಿದೆ !!

ಹಗೆಯ ಅಳಿಯ ಬಯಸಿದೆ
ಹಲವು ನಾಮಗಳ ಧರಿಸಿದೆ
ಹತ್ತವತಾರದಿ ತೋರಿದೆ
ಹರಿನಾಮ ಮಹಿಮೆಯ ಸಾರಿದೆ !!

ಕಾಡುವವರ ಕಾಡಿದೆ
ಬೇಡಿದವರ ಕಾಪಿಡಿದೆ
ಕಪಟನಾಟಕವಾಡಿದೆ
ಲೋಕವೆ ಕೊಂಡಾಡಿದೆ!!

ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ
ಕೃಷ್ಣ ನಿನ್ನ ಕರೆಯುತಿದೆ !!

★

## FOR THE ATTENTION OF MERITORIOUS CHILDREN OF OUR MEMBERS

The students who have passed the following examinations held during March – May 2017 with merit as shown below are requested to contact for consideration of awarding scholarship and certificate of excellence :

| | | |
|---|---|---|
| **S.S.C./H.S.C.** | : | **85% and above** |
| **B.Com./B.A./B.S.C and graduation in any other stream** | : | **70% and above** |
| **Graduation in Medicine/ Engineering & Post Graduation** | : | **65% and above** |

Meritorious students will be felicitated on Durga Pooja to be held on 24th September 2017 at Havyakara Sabhagraha. They are requested to give details of their names, names of their parents with their membership number, contact no. etc. to Smt. Shashikala Hegde; 9869015917 or Smt. Tanuja Hegde; 9869431749 before 15th September 2017 and are requested to bring xerox copy of their marks sheet during Durga Pooja.

**NARAYAN AKADAS**
**Hon. General Secretary**

# ಸಂಕ್ಷಿಪ್ತ ಸುದ್ದಿಗಳು

## ಮೈಸೂರು ಅಸೋಸಿಯೇಶನ್ ಜಾಗತಿಕ ಕನ್ನಡ ಕವನ ಸ್ಪರ್ಧೆ – 2017ರ ಬಹುಮಾನ ವಿತರಣೆ ಸಮಾರಂಭ




'ಸಾಹಿತ್ಯ, ಸಂಸ್ಕೃತಿ ಅನ್ನುವುದು ಸ್ವಂತ ಆಸ್ತಿ ಅಲ್ಲ. ಅದು ಸಾರ್ವಜನಿಕ ಆಸ್ತಿ. ಇಂದು ಹೊಸ ಕವಿತೆ ರಚಿತವಾಗುತ್ತಿದೆಯೆಂದರೆ ಅಲ್ಲಿ ಭಾಷೆ ಉಸಿರಾಡುತ್ತಿದೆ ಎಂದರ್ಥ. ಇಂದು ಓದುಗರಿಗಾಗಿ ಸ್ಪರ್ಧೆ ಏರ್ಪಡಿಸಬೇಕು. ಓದುಗರಿಂದಾಗಿ ಇಂದು ಲೇಖಕರ ಸಂಖ್ಯೆ ಬೆಳೆದಿದೆ ಎಂದರೆ ತಪ್ಪಾಗಲಾರದು. ವಿಜ್ಞಾನದಂತೆ, ವೈದ್ಯಕೀಯದಂತೆ ಸಾಹಿತ್ಯವೂ ಒಂದು ಪ್ರವಾಹ, ಅದು ಜ್ಞಾನದ ಪ್ರವಾಹ. ಅನುಭವದಿಂದ ವಿವೇಕದ ಪ್ರವಾಹ. ಲೇಖಕರಾಗಬಯಸುವವರಿಗೆ ಸಾಹಿತ್ಯದ ಓದು ಅನಿವಾರ್ಯ. ನಮ್ಮ ಹಿರಿಯ ಸಾಹಿತಿಗಳ ತಲಾ ಒಂದು ಕೃತಿಯನ್ನಾದರೂ ಓದಬೇಕು. ಒಂದು ರೀತಿಯ ಕೌಟುಂಬಿಕ ಕತೆ ಸಾಹಿತ್ಯಕ್ಕೆ ಬೇಕು. ನಮಗೆ ಬೇಕಾಗಿರುವ ಸಾಹಿತ್ಯ ನೂರಾರು ಕವಿಗಳಲ್ಲಿ ಹಂಚಿ ಹೋಗಿದೆ. ಹಾಗಾಗಿ ಎಲ್ಲ ಕವಿಗಳ ಕಾವ್ಯವನ್ನು ಓದಬೇಕಾಗಿದೆ' ಎಂದು ಕನ್ನಡದ ಖ್ಯಾತ ಸಾಹಿತಿ, ಕವಿ, ಡಾ. ಜಯಂತ್ ಕಾಯ್ಕಿಣಿ ಅವರು ನುಡಿದರು.

ಜೂ. 24ರಂದು ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಸಂಸ್ಥೆಯು ಹಮ್ಮಿಕೊಂಡಿದ್ದ ಎರಡನೆ ಜಾಗತಿಕ ಕನ್ನಡ ಕವನ ಸ್ಪರ್ಧೆ 2017ರ ಬಹುಮಾನ ವಿತರಣಾ ಸಮಾರಂಭ ಹಾಗೂ ಮೈಸೂರು ಅಸೋಸಿಯೇಶನ್ ಮುಖವಾಣಿ ನೇಸರು ವಿಶೇಷ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಈ ಕಾಲದಲ್ಲಿ ಕಾವ್ಯ, ಸಾಹಿತ್ಯ ಎಂದರೆ ಅವೈಡ್ ಮಾಡುವವರೇ ಹೆಚ್ಚು ಅಂತಹ ಪರಿಸ್ಥಿತಿಯಲ್ಲಿ ಮೈಸೂರು ಅಸೋಸಿಯೇಶನ್ ಮಹತ್ವಪೂರ್ಣವಾದ ಕಾರ್ಯವೊಂದನ್ನು ಹಮ್ಮಿಕೊಂಡಿದೆ. ಕಾವ್ಯ ಪರಿಪೂರ್ಣವಾಗುವುದು ಸಹೃದಯನ ಮನಸ್ಸಿನಲ್ಲಿ. ಕವಿ ತನ್ನನ್ನು ಎಲ್ಲಿ ಮೀರುತ್ತಾನೋ ಅದೇ ನಿಜವಾದ ಆಧ್ಯಾತ್ಮ. ಅದಕ್ಕಾಗಿ ಸಾಹಿತ್ಯ ಮತ್ತು ವೈದ್ಯಕೀಯ ಎರಡು ಸಮಾನ ಕ್ಷೇತ್ರಗಳು ಎನಿಸುತ್ತದೆ. ಇವೆರಡೂ ಕ್ಷೇತ್ರಗಳಿಗೆ ಮನುಷ್ಯನ ಯಾತನೆಯನ್ನು ಕಡಿಮೆ ಮಾಡುವ ಶಕ್ತಿ ಇದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇದರ ಅಧ್ಯಕ್ಷ ಡಾ. ಮನು ಬಳಿಗಾರ್ ಅವರು ಮಾತನಾಡಿ, 'ಇವತ್ತು ಕನ್ನಡ ಭಾಷೆ ಬಹಳ ಆತಂಕದಲ್ಲಿ ಇದೆ. ಆದರೆ ಮುಂಬಯಿಯಂತಹ ನಗರ ಪ್ರದೇಶದಲ್ಲಿ ನಡೆಯುತ್ತಿರುವ ಸಾಹಿತ್ಯ ಕಾರ್ಯಕ್ರಮಗಳನ್ನು ನೋಡಿದಾಗ ಕನ್ನಡ ಭಾಷೆಗೆ ಯಾವ ಆತಂಕವೂ ಇಲ್ಲ ಎಂದು ಹೇಳಬಹುದು. ಮೈಸೂರು ಅಸೋಸಿಯೇಶನ್ ಕನ್ನಡಿಗರಿಗಾಗಿ ಅನೇಕ ಸ್ಪರ್ಧೆಗಳನ್ನು ಹಮ್ಮಿಕೊಂಡಿದೆ. ಇದು ಬಹಳ ಅರ್ಥಪೂರ್ಣವಾದ ಕೆಲಸ. ಇಂದು ಭಾಷೆಯ ಮೂಲಕ ಪ್ರದೇಶಗಳನ್ನು ಗೆದ್ದುಕೊಳ್ಳುವಂತಹ ಸಂದರ್ಭದಲ್ಲಿದ್ದೇವೆ. ನಮಗೆ ನಮ್ಮ ದೇಶದ ಹಾಗೇ ಬೇರೆ ರಾಜ್ಯವೂ ಅಷ್ಟೇ ಮುಖ್ಯವಾಗಬೇಕು. ಆಗ ಮಾತ್ರ ಭಾಷಾ ಸಾಮರಸ್ಯ ಬೆಳೆಯುತ್ತದೆ. ಹೊರನಾಡ ಕನ್ನಡಿಗರ ಸಮಾವೇಶವನ್ನು ಮುಂಬಯಿಯಲ್ಲಿ ಮಾಡುವ ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಕನ್ನಡ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದೇ ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿನ ಉದ್ದೇಶ' ಎಂದರು.

ಇನ್ನೋರ್ವ ಮುಖ್ಯ ಅತಿಥಿ ಮುಂಬಯಿಯ ಖ್ಯಾತ ಸಾಹಿತಿ ಡಾ. ಸುನೀತಾ ಎಂ. ಶೆಟ್ಟಿ ಅವರು ಮಾತನಾಡಿ, 'ಈಗ ಜನ ವಿದ್ಯಾವಂತರಾಗಿದ್ದಾರೆ. ಕವಿಗಳು ಹೆಚ್ಚು ಆಶಾವಾದವನ್ನು ಇಟ್ಟುಕೊಂಡು ಬರೆಯುತ್ತಾರೆ. ಒಂದು ಮೆಚ್ಚಬೇಕಾದ ಅಂಶವೆಂದರೆ ಕವಿಗಳಿಗೆ ತಮ್ಮ ತಾತ, ತಂದೆ ತಾಯಿಯಂದಿರು ಪಟ್ಟ ಕಷ್ಟದ ಬಗ್ಗೆ ವೇದನೆಯಿದೆ. ಹಿಂದಿನ ಪರಂಪರೆ, ಕಷ್ಟಕೋಟಲೆಯನ್ನು ತಮ್ಮ ಕವನಗಳಲ್ಲಿ ದಾಖಲಿಸುವ ಪ್ರಯತ್ನ ನಡೆಯುತ್ತಿದೆ. ಇದು ಆಹ್ಲಾದಕರವಾದ ಬೆಳವಣಿಗೆ. ಕವನ ರಚನೆಯ ಸಂದರ್ಭದಲ್ಲಿ ಅಲ್ಪಪ್ರಾಣ, ಮಹಾಪ್ರಾಣ ಇವುಗಳನ್ನು ಗಮನಿಸದೆ ಇದ್ದರೆ ಕವಿತೆ ಸೋಲುತ್ತದೆ. ಕೆಲವೊಂದು ವಿರೋಧಾಭಾಸದ ಸಂದರ್ಭವನ್ನು ಗಮನಿಸಬೇಕು. ನನ್ನನ್ನು ಇವತ್ತಿಗೂ ಕಾಡುವ ಪ್ರಶ್ನೆ ಎಂದರೆ ಯುಗ ಯುಗ ಕಳೆದರೂ ತಾಯಿ ಯಾಕೆ ಬದಲಾಗೋದಿಲ್ಲ ಅನ್ನೋದು. ಒಬ್ಬ ತಾಯಿ ತನ್ನ ಮಗಳಿಗೆ ಆಶೀರ್ವಾದ ಮಾಡುತ್ತಾ, ಹೆತ್ತುಕೊಡು ಹತ್ತು ಮಕ್ಕಳನ್ನು ನಾನು ಹೊತ್ತು ಸಾಕುವೆ ಎನ್ನುತ್ತಾಳೆ. ಅಂದರೆ ಅವಳಿಗೆ ಅವಳ ಪಟ್ಟ ಪಾಡು ಸಾಕಾಗಲಿಲ್ಲವೆಂದು ಕಾಣುತ್ತದೆ. ಅದಕ್ಕೆ ಮಗಳಿಗೂ ಅದೇ ಆಶೀರ್ವಾದವನ್ನು ನೀಡುತ್ತಾಳೆ' ಎಂದು ನುಡಿದರು.

ಎರಡನೇ ಜಾಗತಿಕ ಕವನ ಸ್ಪರ್ಧೆ 2017ರ ಮೊದಲ ಬಹುಮಾನ ವಿಜೇತರಾದ ಗುರುರಾಜ್ ಬೆಂಗಳೂರು, ರೇಣುಕಾ ರಮಾನಂದ ಅಂಕೋಲಾ, ದ್ವಿತೀಯ ಬಹುಮಾನ ವಿಜೇತರಾದ ವಿನಾಯಕ ಅರಳಸುರಳಿ, ಶುಭಾ ಎ. ಆರ್, ತೃತೀಯ ಬಹುಮಾನ ವಿಜೇತರಾದ ಮುಸ್ತಾಫ ಕೆ. ಎಚ್., ಜಿ. ಕೆ. ಕುಲಕರ್ಣಿ, ಪ್ರೋತ್ಸಾಹ ಬಹುಮಾನ ವಿಜೇತೆ ಶಾಂತಿ ಜೆ. ಶೆಟ್ಟಿ ಅವರಿಗೆ ಬಹುಮಾನ ನೀಡಿ, ಶಾಲು ಹೊದಿಸಿ, ಪುಷ್ಪ ಗೌರವ ಕೊಟ್ಟು ಸನ್ಮಾನಿಸಲಾಯಿತು. ಪ್ರಾಸ್ತಾವಿಕವಾಗಿ ಕೆ. ಮಂಜುನಾಥಯ್ಯ ಮಾತನಾಡಿದರು.

ಅತಿಥಿಗಳಿಗೆ ಶಾಲು ಹೊದೆಸಿ, ನೆನಪಿನ ಕಾಣಿಕೆಯನ್ನಿತ್ತು ಅಸೋಸಿಯೇಶನ್‌ನ ಪದಾಧಿಕಾರಿಗಳು ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮೈಸೂರು ಅಸೋಸಿಯೇಶನ್ ಅಧ್ಯಕ್ಷೆ ಕೆ. ಕಮಲಾ ಅವರು ಮಾತನಾಡಿ, 'ನಮ್ಮ ಕರೆಗೆ ಓಗೊಟ್ಟು ನೀವೆಲ್ಲರೂ ಪ್ರೀತಿಯಿಂದ ಇಷ್ಟೊಂದು ಸಂಖ್ಯೆಯಲ್ಲಿ ಇಲ್ಲಿ ಸೇರಿದ್ದೀರಿ. ಅದೇ ನಮಗೆ ಸಿಕ್ಕಿದ ನಿಜವಾದ ಪ್ರೋತ್ಸಾಹ' ಎಂದು ಅಭಿಮಾನದಿಂದ ನುಡಿದರು. ಕಾರ್ಯಕ್ರಮದ ಕೊನೆಯಲ್ಲಿ ವಿದುಷಿ ಶ್ಯಾಮಲ ಪ್ರಕಾಶ್ ಅವರು ಬಹುಮಾನಿತ ಕವಿತೆಗಳ ಗಾಯನ ಕಾರ್ಯಕ್ರಮದ ರಸಮಂಜರಿಯನ್ನು ನಡೆಸಿಕೊಟ್ಟರು. ನೇಸರು ಪತ್ರಿಕೆಯ ಸಂಪಾದಕಿ ಡಾ.

*PAGE DONATED BY : **SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT (DEC. 2012)***

ಜ್ಯೋತಿ ಸತೀಶ್ ಕಾರ್ಯಕ್ರಮ ನಿರ್ವಹಿಸಿದರು. ಮೈಸೂರು ಅಸೋಸಿಯೇಶನ್‌ನ ಸದಸ್ಯ ಪದ್ಮನಾಭ ಸಿದ್ಧಕಟ್ಟೆ ಪ್ರಾರ್ಥನೆಗೈದರು. ಮಂಜುನಾಥಯ್ಯ ವಂದಿಸಿದರು.

## ನಿರಪೇಕ್ಷ ಸೇವಾಭಾವದ ಕೊಡುಗೆ ಮರಾಠಿಯ ಕುಮಾರವ್ಯಾಸ ಮಹಾಭಾರತ - ಪ್ರಾ. ಜಿ. ಸಿ. ಕುಲಕರ್ಣಿ

'ಪುಣೆಯ ನೆಸ್‌ವಾಡಿಯಾ ಕಾಲೇಜಿನಲ್ಲಿ 1991 - 92 ರಲ್ಲಿ ಆರಂಭವಾದ ರಾಷ್ಟ್ರಮಟ್ಟದ 'ಪ್ರಜ್ಞಾಶೋಧ ಪರೀಕ್ಷೆ'ಗೆ (ಎನ್‌ಟಿ ಎಸ್) ಸಮಾನವಾಗಿ 'ಮಹಾರಾಷ್ಟ್ರ ಪ್ರಜ್ಞಾ ಶೋಧ ಪರೀಕ್ಷೆ' ಕರ್ನಾಟಕ, ಗುಜರಾತ್, ಗೋವಾ ರಾಜ್ಯಗಳಲ್ಲೂ ಜನಪ್ರಿಯವಾಯಿತು. ಜಾಗತಿಕ ಮಟ್ಟದಲ್ಲೂ ಹೆಸರು ಗಳಿಸಿತು. ಅದೊಂದು 'ಮೂಕಕ್ರಾಂತಿ', 'ಶೀತಕ್ರಾಂತಿ' ಎಂದೂ ವರ್ಣಿಸಲ್ಪಟ್ಟಿತು. ಅದರ ಯಶಸ್ಸಿಗೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ ಅನೇಕರು ಅನೇಕ ವಿಧದಲ್ಲಿ ಯೋಗದಾನ ನೀಡಿದರು. ಈ ಸಮಗ್ರ ಸಮರ್ಪಿತ ಸೇವಾಭಾವಕ್ಕೆ ಕೊಡುಗೆಯ ರೂಪದಲ್ಲಿ ಕನ್ನಡದ ಸರ್ವಶ್ರೇಷ್ಠ ಜನಪ್ರಿಯ 'ಕುಮಾರವ್ಯಾಸ ಮಹಾಭಾರತ' ಮರಾಠಿಯ ಮಣ್ಣಿನಲ್ಲಿ ಆರು ನೂರು ವರುಷಗಳ ನಂತರ ಸರಳ ಗದ್ಯಾನುವಾದ ರೂಪದಲ್ಲಿ ಒಡಮೂಡಿದೆ' ಎಂದು ರಸಾಯನ ಶಾಸ್ತ್ರದ ನಿವೃತ್ತ ಪ್ರಾಧ್ಯಾಪಕ ಪ್ರಜ್ಞಾ ಪರೀಕ್ಷೆಯ ಸಂಚಾಲಕ ಪ್ರೊ. ಜಿ. ಸಿ. ಕುಲಕರ್ಣಿ ಅವರು ನುಡಿದರು.

ಅವರು ಪುಣೆಯ ಮರಾಠಿ-ಕನ್ನಡ ಸ್ನೇಹವರ್ಧನ ಕೇಂದ್ರವು ಕನ್ನಡ ಕಲಿಕಾ ವರ್ಗ ಮತ್ತು ಪ್ರಗತ ಕನ್ನಡ ಕಲಿಕಾ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕನ್ನಡ ವರ್ಗದಲ್ಲಿ ಆಯೋಜಿಸಿದ ಬೀಳ್ಕೊಡುಗೆ ಹಾಗೂ ಐದನೆಯ 'ಜ್ಞಾನಸತ್ರ' ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು' ಎಂಬ ಮಾತೊಂದಿದೆ. ರಸಾಯನ ಶಾಸ್ತ್ರದ ಪ್ರಾಧ್ಯಾಪಕರಾದ ಜಿ. ಸಿ. ಕುಲಕರ್ಣಿ ಇವರು ತಮ್ಮ ಕಾರ್ಯಕ್ಕೆ ನೈತಿಕ ಬಲ ನೀಡಿದ, ಯೋಗದಾನ ಮಾಡಿದ, ಮರಾಠಿ ಹೈಸ್ಕೂಲ್ - ಕಾಲೇಜು ಶಿಕ್ಷಕ ವರ್ಗಕ್ಕೆ ಶಾಶ್ವತ ಸ್ವರೂಪದ ಕೊಡುಗೆಯಾಗಿ ಆರುನೂರು ವರುಷಗಳ ಹಿಂದಿನ ಕನ್ನಡ ಕವಿ ಶ್ರೇಷ್ಠ ಗದುಗಿನ ವೀರನಾರಾಯಣನ ಪರಮಭಕ್ತನ ಕುಮಾರವ್ಯಾಸನ ಕನ್ನಡ ಮಹಾಭಾರತವನ್ನು ಸರಳ ಅನುವಾದ ಸ್ವರೂಪದಲ್ಲಿ ಮರಾಠಿಗೆ ತಂದಿರುವುದು ಅಪೂರ್ವ ಸ್ವರೂಪದ ಕನ್ನಡ - ಮರಾಠಿ ಅನುಬಂಧದ ಕಾರ್ಯವಾಗಿದೆ. ವಿಜ್ಞಾನ ಶಾಖೆಯ ಪ್ರಾಧ್ಯಾಪಕರೊಬ್ಬರು ಈ ರೀತಿ ಅನುವಾದ ಪ್ರಕ್ರಿಯೆಯಲ್ಲಿ ತೊಡಗಿ ಯಶಸ್ವಿಯಾದುದು ಬಹುಶಃ, ಭಾರತ ಅಷ್ಟೇ ಏಕೆ ವಿಶ್ವದ ದಾಖಲೆಯೂ ಆಗಬಹುದು' ಎಂದು ಮರಾಠಿ-ಕನ್ನಡ ಸ್ನೇಹವರ್ಧನ ಕೇಂದ್ರದ ಪ್ರಧಾನ ಕಾರ್ಯದರ್ಶಿ ಕೃ. ಶಿ. ಹೆಗಡೆ ನುಡಿದರು. ಕುಲಕರ್ಣಿಯವರ ಸಮಗ್ರ ಪರಿಚಯವನ್ನು ಮಾಡಿಕೊಟ್ಟರು. ಕೇಂದ್ರದ ವತಿಯಿಂದ ಅವರ ಹಸ್ತದಿಂದ ಪ್ರಾ. ಕುಲಕರ್ಣಿಯವರಿಗೆ ಸ್ಮರಣಚಿಹ್ನೆ, ಸ್ಮರಣ ಸಂಚಿಕೆ ನೀಡಿ, ಶಾಲು ಹೊದಿಸಿ, ಶ್ರೀಫಲ ಕೊಟ್ಟು ಸತ್ಕರಿಸಲಾಯಿತು.

ಆ ನಂತರ ಜರಗಿದ 'ಕುಮಾರವ್ಯಾಸ ಮಹಾಭಾರತ ಚರ್ಚಾಸತ್ರ' ದಲ್ಲಿ ಕನ್ನಡ ಕಲಿಕಾ ವರ್ಗದ ಧನಂಜಯ ಕುಡತರಕರ, ರಾಮ ನೇಸರಿ, ಉಮೇಶ ಡೋಲಾರೆ, ಸಂಜಯ ಬಾಬರ, ಸಚಿನ್ ದೇಶಪಾಂಡೆ, ಭರತಕುಮಾರ್ ಪಾಠಕ್, ಸುಧಾಕರ್ ಮರಾಠೆ, ಗಣೇಶ್ ಪಾಂಡೆ, ವೈದೇಹಿ ಮಿಜಾರ, ಅದಿತಿ ಸಂಗೋರಾಮ, ಸುಪ್ರಿಯಾ ಉತ್ತೂರ್‌ಕರ್, ಸುನಂದಾ ಭಸಾಳೆ, ಸುಜಾತಾ ಶಿಂಧೆ, ಸುವರ್ಣಾ ರಾವ್, ನಿಲೀಮಾ ಅಂತರ್‌ಕರ್ ಮುಂತಾದವರು ಪಾಲ್ಗೊಂಡರು.

ಕೇಂದ್ರದ ವಿಶ್ವಸ್ಥ ಪಾಂಗಾಳ ವಿಶ್ವನಾಥ ಶೆಟ್ಟಿ ಬೀಳ್ಕೊಡುಗೆ ಸಮಾರಂಭವನ್ನು ಅಚ್ಚುಕಟ್ಟಾಗಿ ಆಯೋಜಿಸಿದರೆ, ಕೇಂದ್ರದ ವಿಶ್ವಸ್ಥ ಸಿ. ಎಂ. ಹಾರಕುಡೆ ಎಲ್ಲರ ಆಭಾರ ಮನ್ನಿಸಿದರು.

## ರಾಜಧಾನಿಯಲ್ಲಿ ಉತ್ತರ ಕನ್ನಡ ಯಕ್ಷಗಾನದ ಕೀರ್ತಿಪತಾಕೆ 'ಆಂಜನೇಯ ಯಕ್ಷಸಪ್ತಾಹ'ದ ಫಲಶ್ರುತಿ

ಕಳೆದ ಜೂನ್ 27ರಿಂದ ಜುಲೈ 3ರವರೆಗೆ ರಾಜಧಾನಿ ಬೆಂಗಳೂರಿನ ಮಹಾಲಕ್ಷ್ಮೀ ಲೇಔಟ್ ಹಾಗೂ ಸುತ್ತಲ ಯಕ್ಷಕಲಾ ಪ್ರೇಮಿಗಳಿಗೆ ಒಂದು ಯಕ್ಷಗಾನ ಸಪ್ತಾಹದ ಹಬ್ಬ. ಕೊಂಡದಕುಳಿ ಪೂರ್ಣಚಂದ್ರ ಯಕ್ಷಕಲಾ ಮೇಳದವರಿಂದ ಶ್ರೀ ಪ್ರಸನ್ನ ವೀರಾಂಜನೇಯ ದೇವಸ್ಥಾನದ ಸಭಾಂಗಣದಲ್ಲಿ ಪ್ರತಿದಿನ ಸಂಜೆ 6ರಿಂದ 9.30ರವರೆಗೆ ನಡೆಯುತ್ತಿದ್ದ ವಿಶಿಷ್ಟ ಆಖ್ಯಾನಗಳ ಪ್ರಸ್ತುತತೆ, ನಮ್ಮ ಶುದ್ಧ ಕನ್ನಡ ನೆಲದ ಪರಂಪರೆಯ, ಸಾಂಸ್ಕೃತಿಕ ರೂಪದ ವೈಭವೋಪೇತ ಅನಾವರಣ, ಗಣಪತಿ ಪೂಜೆಯಿಂದ ಮಂಗಲ ಪದ್ಯದವರೆಗೂ ಯಾವುದೇ ಒತ್ತಾಯವಿಲ್ಲದೇ ಪೂರ್ಣ ಸ್ವಾದ ಸವಿಯುವ ಪ್ರೇಕ್ಷಕರ ಅನನ್ಯ ಪ್ರೋತ್ಸಾಹ, ಇವುಗಳೊಂದಿಗೆ ಕಾರ್ಯಕ್ರಮಗಳಲ್ಲಿ ಯಾವುದೇ ಲೋಪವೂ ಸುಳಿಯದಂತೆ ಸಂಘಟಕರು ವಹಿಸಿದ ಎಚ್ಚರ, ನಿರೀಕ್ಷೆಗೂ ಮೀರಿ ಪ್ರದರ್ಶಿತವಾದ ಕಲಾವಿದರ ಪಾತ್ರ ಪ್ರೌಢಿಮೆ, ಪ್ರಸಂಗಗಳ ಪ್ರತಿಯೊಂದು ಸಂದರ್ಭದ ಸಂಭಾಷಣಾ ಚಾತುರ್ಯದ ವೈಖರಿಗೆ, ಚಚ್ಚು, ಮೆಚ್ಚು, ಕೆಚ್ಚುಗಳಿಂದ ಕೂಡಿದ ವಾದ ವಿವಾದದ, ವಾಕ್ ಸಮರದ ವಿಸ್ಮಯಗಳಿಗೆ ತುಂಬು ಚಪ್ಪಾಳೆ. ಶ್ರೀಮತ ಕಂಠದ ಭಾಗವತಿಕೆ, ನಾದಭರಿತ ಚೆಂಡೆ ಮದ್ದಳೆಗಳ ಯಕ್ಷಗಾನೀಯ ವಿಶಿಷ್ಟ ವಾತಾವರಣದ ಸೃಷ್ಟಿಯಾಯಿತು.

ಶ್ರೀ ವೀರಾಂಜನೇಯ ಸನ್ನಿಧಿಯಲ್ಲಿ ನಡೆದ ಈ 'ಆಂಜನೇಯ ಯಕ್ಷ ಸಪ್ತಾಹ'ದ ಮೊದಲ ದಿನದ ಆಖ್ಯಾನ 'ಮಾಗಧ ವಧೆ'. ಕೊಂಡದಕುಳಿ ರಾಮಚಂದ್ರ ಹೆಗಡೆಯವರ ಮಾಗಧನ ಪಾತ್ರ ವೈವಿಧ್ಯಪೂರ್ಣ ಕುಣಿತ, ಪ್ರಬುದ್ಧ ನಿರೂಪಣೆಗಳಿಂದ ಕಳೆಗಟ್ಟಿತು.

ಎರಡನೆ ದಿನದ ಪ್ರಸಂಗ 'ಕೃಷ್ಣ ಸಂಧಾನ'. ಕೊಂಡದಕುಳಿಯ ಕೃಷ್ಣ, ಚಪ್ಪರಮನೆ ಶ್ರೀಧರ ಹೆಗಡೆ ವಿದುರ, ತೋಟೀಮನೆಯವರ ಕೌರವ ಪಾತ್ರ ಸುಂದರವಾಗಿ ಮೂಡಿಬಂತು. ಮೂರನೇ ದಿನ 'ಚಿತ್ರಾಕ್ಷಿ ಕಲ್ಯಾಣ' ದಲ್ಲಿ ಹೊಸಮುಖವಾದ ಸುಧೀರ ಉಪ್ಪೂರರು ಚಿತ್ರಾಕ್ಷಿಯಾಗಿ ಸುಂದರ ವೇಷಭೂಷಣ, ಲಾವಣ್ಯಪೂರ್ಣ ಅಭಿನಯಗಳಿಂದ ನೋಡುಗರ ಮನಸೂರೆಗೊಂಡದ್ದು ಹೌದು ಹಾಗೂ ಅಜ್ಜಿಯಾಗಿ ಸ್ವಲ್ಪವೂ ವ್ಯಂಗವೆನಿಸದ ಹಾಸ್ಯದಿಂದ ಚಪ್ಪರಮನೆಯವರೂ ರಂಜಿಸಿದರು. ನಾಲ್ಕನೆಯ ದಿನದ 'ಭಸ್ಮಾಸುರ ಮೋಹಿನಿ' ಹಾಗೂ ಐದನೇ ದಿನ ಅಂದರೆ 1-7-2017ರಂದು ಶ್ರೀ ಡಿ. ಜಿ. ಹೆಗಡೆ ವಿರಚಿತ 'ಮೋಹ ಮೇನಕೆ' ಪ್ರಸಂಗಗಳ ಸವಿಯನ್ನು ಪ್ರೇಕ್ಷಕರು ಮನಸಾರೆ ಸವಿದರು. ಆರನೇ ದಿನದ 'ಕರ್ಣಪರ್ವದಲ್ಲಿ ಶಲ್ಯ-ಕೃಷ್ಣ' ('ಏನಯ್ಯ ಶಲ್ಯಭೂಸ ನಿನ್ನಂಗ') ಮತ್ತು ಕರ್ಣ-ಶಲ್ಯರ ('ಎಲವೊ ಸಾರಥಿ ಸರಳು ಪಾರ್ಥನ ಮಾನಿನಿಗೆ ವೈಧ್ಯವ ದೀಕ್ಷಾ ವಿಧಿಯ ಕೊಡಬಹುದೆ') ಸಂಭಾಷಣೆ- ಸಂವಾದಗಳು ನಿಜವಾದ ವೈಚಾರಿಕ ವಿಷಯ ಪ್ರತಿಪಾದನೆ ಹಾಗೂ ಪಾತ್ರಗಳ ಅಂತಸ್ಸತ್ವದ ಅನಾವರಣಗಳಿಗೆ ವೇದಿಕೆಯಾಯಿತು. ಸುಭದ್ರಾ ಕಲ್ಯಾಣದೊಂದಿಗೆ ಸಪ್ತಾಹವು ಕೊನೆಗೊಂಡಿತು.

- ಜಿ. ಮಹಾಬಲೇಶ್ವರ ಭಟ್, ನಡಗೋಡ (ಶಿರಸಿ)

*Page Donated by : **Shri Suhas Gunishastri,** Prabhadevi In the memory of his parents **Late Smt. Rajeshwari & Late Shri P. V. Gunishastri ,** Past President, H.W.T.*

## Bhajanas



On Guru Poornima Day special 2 hours Bhajan performed by Havyaka Bhajana Mandal at Havyaka Medical Centre, Dombivili between 4.30 p.m. to 6.30 p.m. Special attraction was Flute playing by Bhaskar Bhat. May Guru bless on all of us in the years to come.

## Achievements



**Kumar Ishwar** S/o. Smt. Saraswati and Shri Sitaram Joshi, Muroor (Kallabbe) secured 2nd Rank in S.S.L.C. Exam held by Karnataka Secondary Board scoring 99.84%



**Mr. Vinay** S/o. Smt. Veena and Shri Venkataraman Hegde stood First in College for wireless communication in Final year. He represented University of Mumbai at National & State level Debate and elocution and felicitated by SIES GST for achievement in Literary Exams. He also received NSS University Level certification. He secured 7.0 CGP in B.E. (ITE) Exam held by Mumbai University, May 2016.

***We Congratulate them & Wish them a bright future.***

## ಶ್ರದ್ಧಾಂಜಲಿ



ಶ್ರೀಮತಿ ಸರಸ್ವತಿ ತಿಮ್ಮಣ್ಣ ಅವಧಾನಿ, ಬೊರಿವಲಿ ಅವರು ದಿನಾಂಕ 17.7.2017 ರಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಪತಿ ತಿಮ್ಮಣ್ಣ ಅವಧಾನಿ, ಪುತ್ರರಿಬ್ಬರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವರು. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿ ಹಾಗೂ ಅವರ ಕುಟುಂಬಕ್ಕೆ ಅವರ ಅಗಲುವಿಕೆಯ ನೋವನ್ನು ತಡೆಯುವ ಶಕ್ತಿ ನೀಡಲೆಂದು ಪ್ರಾರ್ಥನೆ.

# ANNOUNCEMENT

The following Medical treatments are available in Dombivli medical centre. Needy persons can take benefit of this service in concessional rates.

1. **Physiotherapy - Dr. Sayali Patwardhan**
   (PT) BPTH (Mum)
   *Timing :* Monday to Saturday
   6.00 p.m. to 7.30 p.m.
   a) Ultra Sound (US)
   b) Short Wave Diathermy (CWD)
   c) Cervical Traction
   d) Transacutenious Nerve Stimulator (TNS)
   e) IFT
   f) Exercise
2. **Ayurvedic Care - Dr. Sailee Sachin Lokare**
   M.D. Ayurveda
   Specialist in Panchakarma
   *Timing :* Monday to Saturday
   5.00 p.m. to 6.00 p.m.
3. **Counselling - Dr. Khushboo Nandu**
   Counselling Psychologist
   *Timing :* Monday to Saturday
   5.30 p.m. to 6.30 p.m
   a) depression
   b) anger issues
   c) any kind of addiction
   d) marital problems
   e) relationship issues etc

***Contact :***
**Mrs. Jaya Bhat - 9987977330**
**Mrs. Sumitra Bhat - 9167574282**
**Havyaka Medical Centre Dombivli Unit**
B-04, Om Trimurti C.H.S. Ltd., Ambika Nagar, M. G. Road, Dombivli (W) - 421 202 • Phone : 0251-248 7291

*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR***

*RNI NO. MAHBIL / 2000 / 746,*
*Postal R.NO. MCN/161/2015-2017*
*WPP License No. MR / Tech / WPP-130 / North / 2017*
*'Licence to post without prepayment'*

*Posted at Mumbai Patrika Channel Stg. Office Mumbai - 400 001*
**Date of Publication : 1st of every month**
**REGISTERED NEWSPAPER**
**Date of Posting :**
**2nd, 3rd of every month**

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**To,**

# BHOJANA KUTUHALA

✍ **Uday Koppikar**



What is the differentiating characteristic between us and other people? The following episode will give an answer. In a very developed western country, an Indian was invited to lunch by his local friend. After he had accepted and the restaurant table booked, an old friend also happened to suddenly drop in just as he was leaving for his lunch appointment. He called up the host and explained the situation to him. Then he asked whether there would be any objection if his Indian friend were to also join them for lunch.

The foreign friend did not seem to mind and the lunch went on well till the bill came. Were it to be an entirely Indian affair, there would have been no problem and the host would have gladly paid the full bill. However, what the foreigner said stunned our Indian friends. He told the waiter to split the bill. The food eaten by himself and his original guest was to be billed separately and he would pay for it. The remainder was for the food eaten by the third unexpected guest. This was meant to be paid by his guest who had invited the third person to join them for lunch.

His logic, as he told his friend, was, 'Look, I invited you so you are my guest and it is right that I should pay for whatever you ate. Your friend as your guest and it is only right that you pay for what he ate. No hard feelings'.

Observe how clinical and unfeeling it all is. Yes, it is the difference in culture. We would happily pay for even such an unexpected guest who has been invited to join us for lunch by our friend. On the contrary, we would perhaps be delighted to do so. It reflects upon the inherent hospitality and generosity that is inculcated in our people through our traditional upbringing. These are our *Samskaras* that we have learnt from the revelations of the Vedic seers.

Our *Samskaras* teach us Food, ANNAM is divine and we ought to be grateful to God for the bounty we have seen given. We also believe that on every morsel of food is written the name of the one for whom it is meant. If we have faith in God and ourselves, we will observe that when we do not have teeth, provision for milk is made and when our teeth appear, rice is also provided. It is an eternal cosmic principle. If for some reason, we do not get any food at all, then even that fasting has a divine purpose behind it. We will learn more about it next week.

## Vacancy

There are two vacancies for students in Havyaka Boys Hostel at Dombivli.

***Those who are interested may please contact :***
**HWT Office, Kalina 022 - 26652591,**
**Dombivli - 0251 - 2487291,**
**Shri G. V. Hegde - 9167434626,**
**Jaya Bhat - 9987977330**

*PAGE DONATED BY : **K.C & CO., SHRI K.C.HEGDE, BORIVLI, ONIKERI (BENGLE) & FAMILY***